# ಅಧ್ಯಯನ – 3 Study - III

# ದೇವರ ರಾಜ್ಯಕ್ಕಾಗಿ ಕಾಯುವ ದಿನಗಳು

ದಾನಿಯೇಲ 12

# Days of Waiting for the Kingdom

**Daniel - XII**

**ರಾಜ್ಯದ ಕಾರ್ಯವನ್ನು ಸಂಕ್ಷೇಪಗೊಳಿಸಲಾಗಿದೆ – ಕಾಯುವ ಸಮಯವನ್ನು ತಿಳುವಳಿಕೆ ಹಾಗೂ ಪ್ರಯಾಣದ ಮಹತ್ತರ ಹೆಚ್ಚಳದ ಮೇಲೆ ಗುರುತಿಸಲಾಗುವುದು – ಸರ್ ಐಸಾಕ್ ನ್ಯೂಟನ್ನನ 'ರೈಲ್ ರೋಡಿಂಗ್'ನ ಮುನ್ನೋಟ – 1260 ದಿನಗಳು – ಮಹಾಸರ್ಪದ ಬಾಯಿಂದ ಪ್ರವಾಹ – ದರ್ಶನದ ಹರಡುವಿಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳಲು 1290 ದಿನಗಳನ್ನು ಗುರುತಿಸುವುದು, ಭಾಗಶಃವಾಗಿ ಸರಿಯಾಗಿದೆ – ಆಶಾಭಂಗ, ಪರೀಕ್ಷೆ ಮತ್ತು ಪರಿಣಾಮಗಳು – 1335 ದಿನಗಳು. ಆಗ ನಿಷ್ಠಾವಂತಿಕೆಯಿಂದ ಕಾಯುವವರ ಮೇಲೆ ಆಶೀರ್ವಾದ – ಈ ಕಾಯುವ ದಿನಗಳು ಕರ್ತನ ಉಲ್ಲೇಖ. ಹತ್ತು ಕನ್ಯೆಯರ ಸಾಮ್ಯ.**

ಹನ್ನೊಂದನೆಯ ಅಧ್ಯಾಯದಲ್ಲಿ ಅಂತ್ಯಕಾಲದ ಸಮಯದ ಬಗ್ಗೆ ಗಮನ ಸೆಳೆಯಲಾಗಿದೆ, ಹನ್ನೆರಡನೆಯ ಅಧ್ಯಾಯವು ರಾಜ್ಯವನ್ನು ಸೂಚಿಸುವುದಾಗಿದ್ದು ಕಾಯುವ ಸಮಯ, ಇತ್ಯಾದಿಗಳ ಬಗ್ಗೆ ಹೇಳುತ್ತದೆ ಮತ್ತು ಅದರ ಸ್ಥಾಪನೆಯು 'ಅಂತ್ಯಕಾಲ'ದ ಸಮಯಕ್ಕೆ ಮುಂಚಿತವಾಗಿ ನೆರವೇರುವುದು. ಮೊದಲನೆಯ ಮೂರು ವಾಕ್ಯಗಳು ದೇವರ ಯೋಜನೆಯ ಭವ್ಯವಾದ ಫಲಿತಾಂಶವನ್ನು ಕೆಲವೇ ಮಾತುಗಳಲ್ಲಿ ವ್ಯಕ್ತಪಡಿಸುತ್ತವೆ.

"ನಿನ್ನ ಜನರ ಪಕ್ಷವನ್ನು ಹಿಡಿದಿರುವ ಮಹಾಪಾಲಕನಾದ ಮಿಕಾಯೇಲನು ಆ ಕಾಲದಲ್ಲಿ ಏಳುವನು; ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು; ಆಗ ನಿನ್ನ ಜನರೊಳಗೆ ಯಾರ ಹೆಸರುಗಳು ಜೀವಭಾಧ್ಯರ ಪಟ್ಟಿಯಲ್ಲಿ ಸಿಕ್ಕುವವೋ ಅವರೆಲ್ಲರೂ ರಕ್ಷಿಸಲ್ಪಡುವರು. ಧೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚೆತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನೆ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು. ಜ್ಞಾನಿಗಳು ತೇಜೋಮಂಡಲಗಳಂತೆ ಪ್ರಕಾಶಿಸುವರು; ಬಹು ಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವವರು ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು" (ದಾನಿ. 12: 1–3) (ಮತ್ತಾಯ 13:43 ಸಹ ನೋಡಿರಿ).

ಹನ್ನೊಂದನೆಯ ಅಧ್ಯಾಯದಲ್ಲಿ 2300 ವರ್ಷಗಳ ಪ್ರಪಂಚದ ಇತಿಹಾಸವನ್ನು ಸಂಕ್ಷಿಪ್ತವಾಗಿ ಸೂಚಿಸಿರುವುದಾದರೆ, ಇನ್ನೂ ಸ್ಪಷ್ಟವಾಗಿ ಮೆಸ್ಸೀಯನ ಈ ಸಹಸ್ರಮಾನದ ಆಳ್ವಿಕೆಯ ಸಾರಾಂಶವನ್ನು ಮೂರು ವಚನಗಳಲ್ಲಿ ಇನ್ನೂ ಹೆಚ್ಚಾಗಿ ಹಾಗೆಯೇ ಸೂಚಿಸಲಾಗಿದೆ. ಮಿಕಾಯೇಲನು (ದೇವರಂತೆ ಅಥವಾ ದೇವರ ಪ್ರತಿನಿಧಿಯಂತೆ ಸೂಚಿಸಲ್ಪಟ್ಟಿದ್ದಾನೆ) ಎಂಬ ಹೆಸರು ಇಲ್ಲಿ ನಮ್ಮ ಮಹಾ ವಿಮೋಚಕನಿಗೆ ಅನ್ವಯಿಸಲಾಗಿದೆ. ಆತನು ನಿಜವಾಗಿಯೂ ಮಹಾ ಅರಸನಂತೆ ಮುಂದೆ ನಿಂತು ದಾನಿಯೇಲನ ಜನರನ್ನು, ದೇವಜನರನ್ನು, ದೇವರನ್ನು ಸತ್ಯಪೂರ್ವಕವಾಗಿಯೂ ನಿಷ್ಠಾಪೂರ್ವಕವಾಗಿಯೂ ನಂಬುವ ಎಲ್ಲರನ್ನೂ – ನಿಜವಾಗಿಯೂ ಇಸ್ರಾಯೇಲ್ಯರನ್ನು ಬಿಡುಗಡೆ ಗೊಳಿಸುವಂತೆ ದೇವರಿಂದ ಅಭಿಷೇಕಿಸ ಲ್ಪಟ್ಟಿದ್ದಾನೆ (ರೋಮಾ. 9:6, 25,26; ಗಲಾತ್ಯ 6:16). ಆತನು ಅವರನ್ನು ಪಾಪದಿಂದಲೂ, ಅಜ್ಞಾನದಿಂದಲೂ, ನೋವು ಮತ್ತು ಮರಣದಿಂದಲೂ, ಮತ್ತು ಈ ಹಿಂದೆ ಅವರನ್ನು ಬಹಳಮಟ್ಟಿಗೆ ವಿನಾಶಗೊಳಿಸಲಿದ್ದ ಸೈತಾನನ ಅಂಥ ಸೇವಕರುಗಳಿಂದ ಉಂಟಾಗುವ ಎಲ್ಲಾ ಉಪದ್ರವ ಗಳಿಂದಲೂ, ಆಕ್ರಮಣಗಳಿಂದಲೂ ಬಿಡುಗಡೆ ಗೊಳಿಸುವವನಾಗಿದ್ದಾನೆ. ಯಜ್ಞದ ಕುರಿಯಾದಾತನ ಪುಸ್ತಕದಲ್ಲಿ ಬರೆಯಲ್ಪಟ್ಟಿರುವವರೆಲ್ಲರೂ ಎಲ್ಲಾ ಶತ್ರುಗಳಿಂದ ನಿರಂತರಕ್ಕೂ ವಿಮೋಚಿಸಲ್ಪಡುವರು; ಯೆಹೂದ್ಯರ ಮತ್ತು ಪುರಾತನ ಪಿತೃಗಳ ಯುಗದಲ್ಲಿ ಯೋಗ್ಯರೆಂದು ಬರೆಯಲ್ಪಟ್ಟವರು, ಮಾತ್ರವಲ್ಲದೆ ಅದೇ ರೀತಿ ಸುವಾರ್ತಾ ಯುಗದಲ್ಲಿ ಬರೆಯಲ್ಪಟ್ಟ ಇವರುಗಳು, ಮತ್ತು ಸಹಸ್ರಮಾನಯುಗಕ್ಕಾಗಿ ಬರೆಯಲ್ಪಡುವವರು ಸಹಾ ವಿಮೋಚಿಸಲ್ಪಡುವರು. ಎಲ್ಲಾ ದೇವಜನರೂ, ಆತನ ತಿಳುವಳಿಕೆಗೆ ಬಂದವರೆಲ್ಲರೂ, ಆತನಿಗೆ ವಿಧೇಯರಾಗಿದ್ದು ಆತನನ್ನು ಪ್ರೀತಿಸುವವರು ವಿಮೋಚಿಸಲ್ಪಡುವರು, ಆದಾಗ್ಯೂ ಕೆಲವರಿಗೆ ಅಂದರೆ ಜಯಶಾಲಿಗೆ ಗೌರವದ ಶ್ರೇಣಿಯನ್ನು ದಯ ಪಾಲಿಸಲಾಗುವುದು ಎಂಬುದನ್ನು ಜಾಗರೂಕತೆಯಿಂದ ಗಮನಿಸಬೇಕಾಗುತ್ತದೆ; ಮಾತ್ರವಲ್ಲದೆ, ಅಲೆಕ್ಸಾಂಡರ್,

ನೀರೋ, ನೆಪೋಲಿಯನ್ ಮತ್ತು ಕೈಸರುಗಳು, ಪೋಪರುಗಳು ಮುಂತಾದ ಹಿಂದಿನ ಮಹಾನುಭಾವರುಗಳು ತಮ್ಮ ತಲಾಂತುಗಳನ್ನು ತಪ್ಪಾಗಿ ಉಪಯೋಗಿಸಿ, ಲೋಕವನ್ನು ಮರುಳುಮಾಡಿ ಅದನ್ನು ತುಳಿದದ್ದನ್ನು ಅವರ ಗುಣಲಕ್ಷಣದಲ್ಲಿ ಕಂಡುಕೊಳ್ಳಬಹುದು ಮತ್ತು ಅಂಥವರು ಸಹಸ್ರಮಾನ ಯುಗದಲ್ಲಿ ನಾಚಿಕೆಗೇಡಿಗೆ ಒಳಗಾಗುವರು. ಕ್ರಿಸ್ತನ ಆಳ್ವಿಕೆಯ ಬಗೆಗಿನ ಈ ಸಂಕ್ಷಿಪ್ತವಾದ ಸಾರಾಂಶವು ಅದು ಅನಾವರಣಗೊಳ್ಳುವ ಸಂಕಟದ ಸಮಯವನ್ನು ಹೇಳುವುದನ್ನು ಬಿಟ್ಟುಬಿಡುವುದಿಲ್ಲ. ಸಂಕಟದ ಸಮಯವನ್ನು ಹಿಂದಿನ ಯಾವುದೇ ಕ್ರಾಂತಿಗೂ ಹೋಲಿಸಲು ಸಾಧ್ಯವಿಲ್ಲ. ಇದರ ಕಷ್ಟಗಳಿಗೆ ಹೋಲಿಸಿದರೆ ಫ್ರೆಂಚ್ ಕ್ರಾಂತಿಯು ಸಹಾ ಸಣ್ಣದಾಗಿದೆ. ಇಂಥಹ ಸಂಕಟವು ರಾಷ್ಟ್ರಗಳು ಉಂಟಾಗಿದ್ದುದರಿಂದಲೂ ಇರಲಿಲ್ಲ, ಮತ್ತೆ ಇರುವದೂ ಇಲ್ಲ; ಈ ಮಹಾ ಅರಸನಾದ ಮಿಕಾಯೇಲನು ಸಮಗ್ರ ಪ್ರಪಂಚವನ್ನು ಗೆಲ್ಲುವವನು ಮಾತ್ರವಲ್ಲ. ಆತನ ಚಕ್ರಾಧಿಪತ್ಯವು ಸದಾಕಾಲಕ್ಕೂ ಇರುವ ಚಕ್ರಾಧಿಪತ್ಯವಾಗಿದೆ. ಆತನ ಸಿಂಹಾಸನಕ್ಕೆ ನ್ಯಾಯವೇ ತಳಹದಿ, ಮಾನವ ಜಾತಿಯವರು ಒಮ್ಮೆ ಅದರ ಲಾಭಗಳ ರುಚಿನೋಡಿದರೆ, ಹೆಚ್ಚಿನವರು ಬೇರೊಂದನ್ನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ಯಾಕೆಂದರೆ ಆತನ ರಾಜ್ಯದಲ್ಲಿ "ಸಮಸ್ತ ಜನಾಂಗದ ಇಷ್ಟವಸ್ತುಗಳು ಬಂದೊದಗುವುದು".

ಇಲ್ಲಿ ಆತನ ಪ್ರವಾದನೆಯ ಎಳೆಯು ಅದರ ಪೂರ್ಣ ಚಲನೆಯ ನಂತರ ಸ್ಥಗಿತಗೊಳ್ಳುವುದು, ಅಧ್ಯಾಯದ ಉಳಿದ ವಚನಗಳು ದಾನಿಯೇಲ ಮತ್ತು ಆತನ ಸಮಯದ ಜೊತೆ ಸೇವಕರುಗಳಿಗಾಗಿ ನೀಡಲ್ಪಟ್ಟಿಲ್ಪಡುವ ಉದ್ದೇಶ ಹೊಂದಿಲ್ಲ, ಆದರೆ ದೇವರ ಮಕ್ಕಳಿಗೆ, ಕಡೆಯ ಕಾಲದಲ್ಲಿ ಬರುವ ಕೆಲವು ನಿಶ್ಚಿತವಾದ ಸಾಂಕೇತಿಕ ಕಾಲವಾದ 1260, 1290 ಮತ್ತು 1335 ದಿನಗಳ ಅವಧಿಗಳಲ್ಲಿ ಅನುಕ್ರಮವಾಗಿ ಜೀವಿಸುವ ದಾನಿಯೇಲನ ಜೊತೆ ಸೇವಕರುಗಳಿಗೆ ನೀಡಲ್ಪಟ್ಟಿದೆ. ಅದರಿಂದ ಸೂಕ್ತ ಸಮಯದಲ್ಲಿ ನಾವು ಜೀವಿಸುವ ಸಮಯವನ್ನು ಅದು ನಿಜವಾಗಿಯೂ ಸುಗ್ಗಿಯ ಸಮಯವಾಗಿದೆ ಅಥವಾ ಸುವಾರ್ತಾ ಯುಗದ 'ಅಂತಿಮ' ಸಮಯವಾಗಿದೆ ಎಂದು ಮನದಟ್ಟುಪಡಿಸಿಕೊಳ್ಳಬಹುದು.

ದಾನಿಯೇಲನು ಈ ಲೋಕದ ರಾಜ್ಯಗಳ ನಡುವೆ ಉಂಟಾಗುವ ಕಚ್ಚಾಟಗಳ ಬಗ್ಗೆ ಮತ್ತು ಅಂತಿಮವಾಗಿ ಮಹಾಅರಸನಾದ ಮಿಕಾಯೇಲನದ ಕೈಯಲ್ಲಿ ವಿಜಯವುಂಟಾಗುವ ಬಗ್ಗೆ ದೀರ್ಘವಾದ ವರದಿಯನ್ನು ಕೇಳಿಸಿಕೊಂಡವನಾಗಿದ್ದು ಅದು ಯಾವಾಗ ದೇವಜನರನ್ನು ಬಿಡುಗಡೆಗೊಳಿಸುತ್ತದೆ ಎಂದು ಆಶ್ಚರ್ಯದಿಂದ ನೋಡುವವನಾಗಿದ್ದನು. ಆದರೆ ನಾಲ್ಕನೆಯ ವಚನದಲ್ಲಿ ಅವನಿಗೆ "ದಾನಿಯೇಲನೇ, ನೀನು ಈ ಮಾತುಗಳನ್ನು ಮುಚ್ಚಿಡು, ಅವುಗಳನ್ನು ಬರೆಯುವ ಗ್ರಂಥಕ್ಕೆ ಮುದ್ರೆಹಾಕು, ಅಂತ್ಯಕಾಲದವರೆಗೆ ಮರೆಯಾಗಿರಲಿ; ಬಹು ಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವುದು" ಎಂದು ಹೇಳಲ್ಪಟ್ಟಿತು.

ಜನರ ಸಾಮಾನ್ಯ ಜ್ಞಾನವು ಹೆಚ್ಚಾಗಿ ದಾನಿಯೇಲನ 11ನೇ ಅಧ್ಯಾಯದಲ್ಲಿ ಹೇಳಿರುವ ಅಂತ್ಯ ಕಾಲದ ಬೋಧನೆಯು ಅದು 1799 ರಲ್ಲಿ ಪ್ರಾರಂಭವಾಯಿತೆಂಬ ಅನುಭವ ಮಾಡಿಕೊಂಡಿತಲ್ಲದೆ, ಅತ್ತಿತ್ತ ತ್ವರಿತವಾಗಿ ತಿರುಗಾಡುತ್ತಾ, ಪ್ರಯಾಣಮಾಡುತ್ತಾ ಇರುವುದನ್ನು ದೃಢೀಕರಿಸಿದೆ. ಇವೆಲ್ಲವೂ ಅಂತ್ಯ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಮೊದಲನೆಯ ಉಗಿ ದೋಣಿಯು (steam boat) 1807ರಲ್ಲಿ, ಮೊದಲನೆಯ ಉಗಿಯ ಕಾರು (steam car) 1831ರಲ್ಲಿ, ಮೊದಲನೆಯ ಟೆಲಿಗ್ರಾಂ (ತಂತಿ ಸಂದೇಶ) 1844ರಲ್ಲಿ ಚಾಲನೆಗೊಂಡಿತು, ಇಂದಿಗೂ ಸಹಸ್ರಾರು ಬೃಹತ್ ಕಾರುಗಳೂ, ವಿಮಾನಗಳೂ (Aeroplanes), ಹಬೆಯ ಹಡಗುಗಳೂ (Steam Ships) ಬಹಳಷ್ಟು ಮಂದಿಯನ್ನು ಅತ್ತಿತ್ತ ಸಾಗಿಸುತ್ತವೆ.

ಹದಿನೇಳನೆಯ ಶತಮಾನದ ಸರ್ ಇಸಾಕ್ ನ್ಯೂಟನ್ ಎಂಬ ಪ್ರಸಿದ್ಧ ಖಗೋಳ ಶಾಸ್ತ್ರಜ್ಞನು, ದಾನಿಯೇಲನ ಈ ಹೇಳಿಕೆಯ ಬಗ್ಗೆ ಬಹಳ ಆಸಕ್ತನಾಗಿದ್ದನು ಮತ್ತು ಅದರ ನೆರವೇರಿಕೆಯಲ್ಲಿ ಮಾನವ ಜ್ಞಾನವು ಜನರು ಘಂಟೆಗೆ 50 ಮೈಲು ದೂರ ಚಲಿಸುವಷ್ಟರ ಮಟ್ಟಿಗೆ ಹೆಚ್ಚುವುದೆಂಬ ತನ್ನ ನಂಬಿಕೆಯನ್ನು ಪ್ರಕಟಿಸಿದನು.

ಹೆಸರಾಂತ ಫ್ರೆಂಚ್ ನಾಸ್ತಿಕನಾಗಿದ್ದ ವಾಲ್ಟೇರ್ (Voltaire) ಎಂಬಾತನು ಈ ಹೇಳಿಕೆಯನ್ನು ಕುರಿತು ಈ ರೀತಿಯಾಗಿ ತನ್ನ ನಿಂದಾತ್ಮಕ ಟಿಪ್ಪಣಿ ಬರೆದನು:–

ಗುರುತ್ವಾಕರ್ಷಣೆಯ ನಿಯಮಗಳನ್ನು ಬರೆದ ಪ್ರಸಿದ್ಧ ತತ್ವಜ್ಞಾನಿ "ನ್ಯೂಟನ್ನನ ಬಲಿಷ್ಠವಾದ ಮನಸ್ಸನ್ನು ಈಗ ನೋಡಿರಿ, ಆತನು ವೃದ್ಧನಾಗಿ ಮುದಿಭ್ರಾಂತಿಯನ್ನು ತಲುಪಿದ್ದು ಸತ್ಯವೇದ ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದ್ದಾನೆ. ಅದರಲ್ಲಿರುವ ಅಸಂಗತವಾದ ಅರ್ಥವಿಲ್ಲದ ಸಂಗತಿಗಳ ಲಾಭಪಡಕೊಳ್ಳುವಂತೆ ಆತನ ಮಾನವ ಜ್ಞಾನವು ಇನ್ನೂ ಹೆಚ್ಚಬೇಕಾಗಿದೆ ಮತ್ತು ನಾವು

ಘಂಟೆಗೆ ಐವತ್ತು ಮೈಲು ವೇಗದಲ್ಲಿ ಚಲಿಸಬಹುದು ಎಂದು ನಂಬಿಸಲು ಹೊರಟಿದ್ದಾನೆ ಈ ಬಡ ಮುದಿ ಮೂಢ".

ಅಂತ್ಯಕಾಲಕ್ಕೆ ಬಹಳ ಹಿಂದೆಯೇ ತೀರಿ ಕೊಂಡಿರುವ ಈ ಇಬ್ಬರೂ ಜ್ಞಾನವನ್ನು ಅದ್ಭುತವಾಗಿ ಹೆಚ್ಚಿಸಿದ್ದಾರೆ, ಅವು ದೇವರ ಪ್ರಕಟನೆಯು ಮೇಲೆ ಆತುಕೊಂಡಿರುವ ಕ್ರೈಸ್ತ ತತ್ವಜ್ಞಾನಿಯ ಭವಿಷ್ಯೋಕ್ತಿಗಳನ್ನು ಹೆಚ್ಚಾದುದಕ್ಕೂ ಮಿಗಿಲಾಗಿ ನೆರವೇರಿಸುವವುಗಳಾಗಿವೆ.

ದಾನಿಯೇಲನಿಗಲ್ಲ, ಆದರೆ ಅಂತ್ಯಕಾಲದಲ್ಲಿ ಜೀವಿಸುವ ದೇವರ ಮಕ್ಕಳಿಗೆ ವಚನ 5–7ರವರೆಗಿನ ಈ ಸಂಭಾಷಣೆ ಮುಂತಾದವುಗಳು: "ಕೂಡಲೇ, ದಾನಿಯೇಲನಾದ ನಾನು ಮತ್ತಿಬ್ಬರನ್ನು ಕಂಡೆನು; ಅವರೊಳಗೆ ಒಬ್ಬನು ನದಿಯ ಈ ದಡದಲ್ಲಿ, ಇನ್ನೊಬ್ಬನು ಆ ದಡದಲ್ಲಿ ನಿಂತಿದ್ದರು. ಇವರಲ್ಲಿ ಒಬ್ಬನು – ಈ ಅಪೂರ್ವಕಾರ್ಯಗಳು ಕೊನೆಗಾಣುವುದಕ್ಕೆ ಎಷ್ಟು ಕಾಲ ಹಿಡಿಯುವುದು ಎಂದು ನದಿಯ ನೀರಿನ ಮೇಲೆ ನಾರಿನ ಹೊದಿಕೆಯನು ಹೊದ್ದು ನಿಂತಿದ್ದ ಪುರುಷನನ್ನು ಕೇಳಲು ಆ ಪುರುಷನು ಎಡಬಲ ಕೈಗಳನ್ನು ಆಕಾಶದ ಕಡೆಗೆ ಎತ್ತಿಕೊಂಡು – ಶಾಶ್ವತ ಜೀವಸ್ವರೂಪನಾಣೆ ಒಂದು ಕಾಲ, ಎರಡು ಕಾಲ ಅರ್ಧ ಕಾಲ ಕಳೆಯಬೇಕು; ದೇವರ ಜನರ ಬಲವನ್ನು ಸಂಪೂರ್ಣವಾಗಿ ಮುರಿದುಬಿಟ್ಟ ಮೇಲೆ ಈ ಕಾರ್ಯಗಳೆಲ್ಲಾ ಮುಕ್ತವಾಗುವವು ಎಂಬುದಾಗಿ ನನ್ನ ಕಿವಿಗೆ ಬೀಳುವಂತೆ ಹೇಳಿದನು".

ವಿಶೇಷ ವಿಚಾರಣೆಯ ಸಂಗತಿಯು 11:31–33 ರಲ್ಲಿರುವ ಹಾಳು ಮಾಡುವ ಅಸಹ್ಯ ವಸ್ತುವು ಪವಿತ್ರ ಸ್ಥಾನದಲ್ಲಿ ನಿಂತಿರುವುದು (Abomination of desolation). ಇದನ್ನು ದಾನಿಯೇಲನು ಸರಿಯಾಗಿ ಅಧ್ಯಾಯ 7:8–11, 21,24–26 ಮತ್ತು 8:10–12, 24–26ರಲ್ಲಿ ನೀಡಿರುವ ತನ್ನ ಹಿಂದಿನ ದರ್ಶನಗಳಲ್ಲಿ ಕಂಡ ದಾರುಣ ದೃಶ್ಯಗಳೊಡನೆ ಹೊಂದಾಣಿಕೆ ಮಾಡಿದ್ದಾನೆ.

ಒಂದು ಕಾಲ, ಎರಡು ಕಾಲ, ಅರ್ಧ ಕಾಲಗಳು ಅಥವಾ ಮೂರುವರೆ ಕಾಲಗಳು ಅಥವಾ ವರ್ಷಗಳು (360 X 3½ = 1260 ದಿನಗಳು, ಸಾಂಕೇತಿಕ ಕಾಲ. ಅಕ್ಷರಶಃ 1260 ವರ್ಷಗಳು). ಇಲ್ಲಿ ಹೇಳಿರುವಂತೆ, ಅಥವಾ ಬೇರೆ ಎಲ್ಲಿಯಾದರೂ ಹೇಳಿರುವಂತೆ ಪೋಪನ ಅಧಿಕಾರದ ಸಮಯವಾಗಿದೆ. ದಾನಿ. 7:25; 12:7 ಮತ್ತು ಪ್ರಕಟನೆ 12:14ನ್ನು ಪ್ರಕಟನೆ 12:6; 13:5ರೊಂದಿಗೆ ಹೋಲಿಸಿರಿ. 1260ರಲ್ಲಿ ಅಥವಾ ಈ 1260 ವರ್ಷಗಳ ಪೋಪನ ವರ್ಷಾವಧಿಯಲ್ಲಿನ "ಪ್ರವಾಹ"ವು ಈ ಪ್ರವಾಹದ ಮೇಲೆ ನಿಂತುಕೊಂಡಿದ್ದ ದೇವದೂತನು ತೋರಿಸಿ ಅಧಿಕಾರದ ಮುಕ್ತಾಯವನ್ನು ಪ್ರಕಟಿಸಿದಂತೆ, ಈಗಾಗಲೇ ಉಲ್ಲೇಖಿಸಿರುವ ಫ್ರೆಂಚ್ ಕ್ರಾಂತಿಯ ಸಮಯದಲ್ಲಿನ ಸ್ಥಿತಿಯನ್ನು ಸಂಕೇತಿಸುವುದಾಗಿತ್ತು. ಪ್ರಕಟನೆ 12:15,16ರಲ್ಲಿ ಇನ್ನೂ ಪೂರ್ಣವಾಗಿ ಉಲ್ಲೇಖಿಸಿರುವ ಘಟಸರ್ಪದ ಬಾಯಿಂದ ಹೊರಟ ನೀರಿನ ಪ್ರವಾಹವು ಇದೇ ಆಗಿದೆ. ಸೈತಾನನ ದೃಷ್ಟಿಯಲ್ಲಿ ಅದರ ನಿಜವಾದ ಉದ್ದೇಶವು ಪ್ರತಿಭಟಿಸುವ ಸ್ತ್ರೀಯನ್ನು ವಿನಾಶಗೊಳಿಸುವುದಾಗಿದೆ (ಪ್ರತಿಭಟಿಸುವ ದೇವರ ಸಭೆ). ಆಕೆಯು ಅರಣ್ಯದಲ್ಲಿ ಅವಿತುಕೊಳ್ಳುವ (1260 ವರ್ಷಗಳು) ಮೂರುವರೆ ವರ್ಷದ ಅವಧಿಯು ಸಧ್ಯದಲ್ಲಿಯೇ ಮುಕ್ತಾಯ ಗೊಳ್ಳಲಿದೆ ಮತ್ತು ಆಕೆಯು ತನ್ನ ಇನಿಯನ (ದೇವರ ವಾಕ್ಯ) ತೋಳುಗಳ ಮೇಲೆ ಒರಗಿಕೊಂಡು ಪ್ರಖ್ಯಾತಿಗೆ ಬರುವಳು – ಪರಮಗೀತ 8:5.

ಸಾಂಕೇತಿಕವಾಗಿ 'ನೀರು' ಸಾಮಾನ್ಯವಾಗಿ ಸತ್ಯವನ್ನು ಪ್ರತಿನಿಧಿಸುತ್ತದೆ. ಮತ್ತು ಈ ಸಂಕೇತವು ಘಟಸರ್ಪದ ಬಾಯಿಂದ ಹೊರಡುವುದಾದರೂ ಅದು ತನ್ನ ಅರ್ಥವನ್ನು ಕಾಪಾಡಿಕೊಂಡಿದೆ. ಈ ಸಂಕೇತದಿಂದ ತಿಳಿಸಲ್ಪಟ್ಟ ಆಲೋಚನೆಯೆಂದರೆ, ನಾವು ಇಲ್ಲಿ ಇದೀಗ ಕಂಡುಕೊಂಡಂತೆ ಕೆಟ್ಟ ಉದ್ದೇಶಗಳುಳ್ಳ ಕೆಟ್ಟ ಪಾರುಪತ್ಯದ ಮೂಲಕವೂ ಸತ್ಯವು ಹೊರಬರುತ್ತದೆ ಎಂಬುದು; ಫ್ರೆಂಚ್ ಕ್ರಾಂತಿಯ ಶಕ್ತಿಯು ಪಾದ್ರಿಗಳ ಹಾಗು ಅರಸು ವರ್ಗಗಳ ಐಹಿಕ ಧೋರಣೆಗಳು ಮತ್ತು ವೈಯುಕ್ತಿಕ ಸ್ವಾತಂತ್ರ್ಯ ಮತ್ತು ಎಲ್ಲರ ಹಕ್ಕು ಮುಂತಾದ ಹಲವಾರು ನಿಷ್ಠುರ ಸತ್ಯಗಳ ಮೂಲಕ ಪ್ರೇರೇಪಿಸಲ್ಪಟ್ಟಿತ್ತು ಎಂಬ ವಾಸ್ತವದಲ್ಲಿ ಅಡಗಿದೆ. ಪೌರ ಮತ್ತು ಕ್ರೈಸ್ತ ಸಭೆಯ ದಬ್ಬಾಳಿಕೆಯ ವಿರುದ್ಧ 'ಮಾನವರ ಹಕ್ಕು' ಎಂಬ ಆ ಕ್ರಾಂತಿಯ ನಿಜವಾದ ಘೋಷಣಾ ವಾಕ್ಯವಾಗಿತ್ತು. ಮಾನವ ಹಕ್ಕುಗಳ ಬಗ್ಗೆ ಸತ್ಯವು ಅಲ್ಲಿ ಕಂಡು ಬಂದವು ಮತ್ತು ಹೇಳಲ್ಪಟ್ಟವು. ಇದು ನಮಗೆ ಅವರ ತಿಳಿಗೇಡಿತನ, ಮೂಢನಂಬಿಕೆ ಮತ್ತು ಆ ಕಾಲದ ದಾಸ್ಯ ಮನೋಭಾವ ಇವುಗಳನ್ನು ಪರಿಗಣಿಸುವಾಗ ನಮಗೆ ಆಶ್ಚರ್ಯ ವಾಗುತ್ತದೆ. ಇವುಗಳ ಅಡಿಯಲ್ಲಿ ಸಮೂಹಗಳು ಅಷ್ಟು ದೀರ್ಘಕಾಲದವರೆಗೆ ಇರಿಸಲ್ಪಟ್ಟಿದ್ದವು. ಆಗ ಫ್ರಾನ್ಸಿನ ಮೇಲೆ ಅನೇಕ ಸತ್ಯಗಳು ರಕ್ತ ಪ್ರವಾಹದಂತೆ ರಭಸವಾಗಿ ನುಗ್ಗಿ ಬಂದುದ್ದನ್ನು ಈಗ ಎಲ್ಲಾ ನಾಗರೀಕರೂ ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆ; ಆದರೆ ಅವುಗಳು ಬಹಳ ಪ್ರಬಲವಾಗಿದ್ದವು, ಮತ್ತು ಆ ಸಮಯದಲ್ಲಿ ಬಹಳ ಹಠಾತ್ತಾಗಿ ಹಾಕಲ್ಪಟ್ಟವು.

ನಿಶ್ಚಯವಾಗಿಯೂ, ಸರ್ಪವು, ಸೈತಾನನು ದೈವಾನುಗ್ರಹದಡಿಯಲ್ಲಿ ಏನು ಫಲಿಸಿವುದೆಂಬುದನ್ನು ಬಯಸಿರಲಿಲ್ಲ. ಆದರೆ ಅದರ ವಿರುದ್ಧವಾದ ಉದ್ದೇಶಹೊಂದಿತ್ತು ಎಂದು ಪ್ರವಾದನೆಯು ಸ್ಪಷ್ಟಪಡಿಸುತ್ತದೆ. ಆತನು ಬೇರೆ ಸಂದರ್ಭಗಳಲ್ಲಿ ಮಾಡಿದಂತೆ ಈಗಲೂ ಇದರಲ್ಲಿ ಆತನು ತನ್ನನ್ನು ಅತಿಕ್ರಮಿಸಿಕೊಂಡನು. ಸೈತಾನನು ಎಂದಿಗೂ ಆಶೀರ್ವದಿಸಲು ಮತ್ತು ಉಲ್ಲಾಸಗೊಳಿಸಲು ಮತ್ತು ದಾಸತ್ವದಿಂದ ಬಿಡುಗಡೆಗೊಳಿಸಲು ಸತ್ಯದ ಪ್ರವಾಹವನ್ನು ಕಳುಹಿಸಲಾರನು. ಅದಕ್ಕೆ ವ್ಯತಿರಿಕ್ತವಾಗಿ ಆತನ ಪ್ರಯತ್ನವು ಎಲ್ಲರನ್ನೂ ಕುರುಡರನ್ನಾಗಿ ಮಾಡುವುದು, ಮಾನವಜಾತಿಯನ್ನು ತಿಳಿಗೇಡಿತನ ಮತ್ತು ಮೂಢ ನಂಬಿಕೆಗಳಿಂದ ಕುರುಡರನ್ನಾಗಿ ಮಾಡುವನು; ಫಕ್ಕನೆ ಹರಿದು ಬರುವ ಈ ಸತ್ಯದ ಪ್ರವಾಹವು ಹೊರಸೂಸುವಿಕೆಯ ಕಾರ್ಯವೆಸಗುವಂತೆ, ಈಗಾಗಲೇ ಸುಧಾರಣೆಯ ಫಲವಾಗಿ ಸತ್ಯವೇದದ ಮೂಲಕ ಜನರಿಂದ ಸ್ವೀಕರಿಸಲ್ಪಟ್ಟ ಬಿಡುಗಡೆಯ ಆಹಾರವನ್ನು ಚೆಲ್ಲುವಂತೆ ಸಂಕಲ್ಪಿಸಲ್ಪಟ್ಟಿದೆ. ಆ ರೀತಿಯಲ್ಲಿ ಅದು ಆಳ್ವಿಕೆಮಾಡುವವರಿಗೂ, ಬೋಧಕರುಗಳಿಗೂ ಅರಾಜಕತೆಯ ಭಯದಿಂದ ಸತ್ಯವನ್ನು ವಿರೋಧಿಸು ವಂತೆ ಒತ್ತಾಯಿಸುತ್ತದೆ.

ಫ್ರೆಂಚ್ ಮಹಾ ಕ್ರಾಂತಿಯನ್ನು ಪ್ರೇರೇಪಿಸುವ ಸೈತಾನನ ಸಂಕಲ್ಪವು ಯೂರೋಪಿನಾದ್ಯಂತ ದಿಗಿಲನ್ನುಂಟುಮಾಡುವುದಾಗಿತ್ತು. ವಿಶೇಷವಾಗಿ ಸ್ವಾತಂತ್ರದ ಪರವಾಗಿಲ್ಲದ ಪ್ರಭಾವಿತ ವರ್ಗದವರ ಮಧ್ಯದಲ್ಲಿ ಬಿಡುಗಡೆಗೆ ಪ್ರತಿಕೂಲರಾದವರು ಮತ್ತು ಫ್ರಾನ್ಸಿನಲ್ಲಿ ಸ್ಪಷ್ಟಪಡಿಸಿದ ಅನಿಸಿಕೆ ಎಂದರೆ, ರೋಮ್ ಸಂಪ್ರದಾಯಗಳನ್ನು ಕಿತ್ತೊಗೆಯುವುದಾದರೆ ಸ್ವತಂತ್ರವು ಪೂರ್ತಿಯಾಗಿ ಹತೋಟಿ ಮೀರುವುದು ಹಾಗಾಗಿ ಎಲ್ಲಾ ಕಾನೂನು ನಿಯಮಗಳನ್ನು ತ್ವರಿತವಾಗಿ ಕೊನೆ ಗೊಳ್ಳುವುದು ಎಂಬುದಾಗಿತ್ತು. ಇದು ಕಾರ್ಯನೀತಿಯ ಕರಾಮತ್ತು, ಅದರ ಜನಕನಿಗೆ ಅರ್ಹವಾಗಿದ್ದು ಮತ್ತು ಪ್ರವಾದಿಯು ತೋರಿಸುವಂತೆ ಕನ್ಯೆ (ಸುಧಾರಿತ ಸಭೆ)ಯನ್ನು ಮುಳುಗಿಸುವಂತೆ ವಿನ್ಯಾಸಗೊಂಡಿತ್ತು. ಮತ್ತು ಎಲ್ಲಾ ಸಂರಕ್ಷಕರನ್ನೂ, ಶಾಂತಿಪ್ರಿಯರನ್ನೂ, ಆಳ್ವಿಕೆ ಮಾಡುವವರು ಮತ್ತು ಆಳಲ್ಪಡುವವರನ್ನು ಪೋಪನ ಅಧಿಕಾರದೊಂದಿಗೆ ಅನ್ಯೋನ್ಯಗೊಳ್ಳಲು ವಾಪಸ್ ಸಂಘಟಿಸುವುದಾಗಿತ್ತು. ಈ ವ್ಯವಸ್ಥೆಯ ವಿಫಲತೆಯು ಅದರ ವಿನ್ಯಾಸಕನ ಕುಟಿಲತೆಯ ಅಭಾವದಿಂದಲ್ಲ, ಆದರೆ ದೇವರ ರದ್ದುಪಡಿಸುವಿಕೆಯ ಶಕ್ತಿಯ ಕಾರಣವಾಗಿತ್ತು. ಆತನು ಎಲ್ಲವುಗಳೂ ಒಟ್ಟಾಗಿ ಒಳ್ಳೇದಾಗುವಂತೆ ಮಾಡಲು ಸಮರ್ಥನಾಗಿದ್ದಾನೆ.

ಈ ಪ್ರಕರಣದಲ್ಲಿ ತನ್ನ ಸಭೆಯೆಂಬ ಸ್ತ್ರೀಯನ್ನು ಸೈತಾನನ ಕಪಟೋಪಾಯಗಳಿಂದ ರಕ್ಷಿಸುವಂತೆ ಮತ್ತು ಉದ್ದೇಶಿತ ಕೆಟ್ಟ ಕಾರ್ಯಗಳನ್ನು ಒಳ್ಳೇದಾಗಿ ಕಾರ್ಯವೆಸಗುವಂತೆ ದೇವರ ಯೋಜನೆಯು ಕಾರ್ಯವೆಸಗುವುದನ್ನು ಸ್ಪಷ್ಟವಾಗಿ ಪತ್ತೆಹಚ್ಚಬಹುದು. ಇದು ಸುಮಾರು ಹದಿನೇಳು ಶತಮಾನಗಳ ಹಿಂದೆ ಮಾಡಿದ "ಆದರೆ ಭೂಮಿಯು ಆ ಸ್ತ್ರೀಯ ಸಹಾಯಕ್ಕೆ ಬಂದು ಬಾಯಿ ತೆರೆದು ಘಟಸರ್ಪನು ತನ್ನ ಬಾಯೊಳಗಿಂದ ಬಿಟ್ಟ ನದಿಯನ್ನು ಕುಡಿದುಬಿಟ್ಟಿತು" (ಪ್ರಕಟನೆ 12:16) ಎಂಬ ಭವಿಷ್ಯವಾಣಿಯ ಸಂಪೂರ್ಣ ನೆರವೇರಿಕೆಯಾಗಿದೆ. ಸಾಂಕೇತಿಕವಾಗಿ, ಭೂಮಿಯು, ಈಗಾಗಲೇ ವಿವರಿಸಿದಂತೆ ವ್ಯವಸ್ಥೆಯನ್ನು ಜನರು, ಮತ್ತು ಸಮಾಜವನ್ನು ಪ್ರತಿನಿಧಿಸುತ್ತದೆ; ಶಿಸ್ತನ್ನು ಪ್ರೀತಿಸುವ ಜನ ಫ್ರಾನ್ಸಿನಲ್ಲಿ ಹರಡಿದ ಸತ್ಯದ ಪ್ರವಾಹವು ಪೋಪನ ಅಧಿಕಾರವನ್ನು ಮತ್ತು ಅದರ ಪೌರೋಹಿತ್ಯ ಐಹಿಕಧೋರಣೆಗಳ, ಚಕ್ರಾಧಿಪತ್ಯ ಮತ್ತು ಅದರ ಪರಾವಲಂಬಿ ವೈಭವಶಾಲಿಗಳ ಆಡಳಿತದ ಮೇಲೆ ದೋಷಾರೋಪಣೆ ಮಾಡಿರುವುದು ಇತಿಹಾಸದ ಸತ್ಯಸಂಗತಿಯಾಗಿದೆ. ಹೆಚ್ಚಾದ, ತಿಳಿಗೇಡಿತನ, ಬಡತನ ಮತ್ತು ಮೂಢನಂಬಿಕೆಗಳಿಗೆ ಜವಾಬ್ದಾರಿಯಾದ ಕಾರಣಗಳು ನುಂಗಲ್ಪಟ್ಟಿತು ಅಥವಾ ಯೂರೋಪಿನ ಜನ (ರೋಮ್ ಲೋಕ)ರಿಂದ ಸಾಮಾನ್ಯವಾಗಿ ಹೀರಲ್ಪಟ್ಟಿತು. ಈ ಪ್ರಕರಣವು ಅಕ್ಷರಮಟ್ಟಿಗೆ ಇದ್ದು, ಪೋಪನ ಅಧಿಕಾರ ಮತ್ತು ರಾಜ ಶ್ರೀಮಂತರ ಆಡಳಿತ ಮುಂತಾದವುಗಳು ಸಂಪೂರ್ಣವಾಗಿ ಎಚ್ಚೆತ್ತುಕೊಂಡವು, ಮಾತ್ರವಲ್ಲದೆ ಪೋಪನ ಪ್ರಭಾದ ಕುಸಿತ ಮತ್ತು ನೆಪೋಲಿಯನ್ನನ ಸೈನ್ಯದಿಂದ ಅವುಗಳನ್ನು ಸಾಧ್ಯಂತವಾಗಿ ಬೇರ್ಪಡಿಸಲಾಯಿತು. ವಿಧಿಯ ಮನುಷ್ಯನು ಅಂತಿಮವಾಗಿ ನಾಶಗೊಂಡಾಗ, ಹಾಗೂ ಯೂರೋಪಿನ ಜನರು ಜನರ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತೆ ಮತ್ತು ತಮ್ಮ ಸ್ವಂತ ಸಿಂಹಾಸನಗಳನ್ನು ಶಾಶ್ವತಗೊಳಿಸುವಂತೆ 'ಪವಿತ್ರ ಮೈತ್ರಿ' ಹೆಸರಿನ ನೆಂಟಸ್ಥಿಕೆಯನ್ನು ಮಾಡಿಕೊಳ್ಳುವ ಹೊತ್ತಿಗೆ, ಜನರನ್ನು ನಿರ್ಬಂಧಿಸಲು ತಡವಾಗಿತ್ತು. ಪ್ರವಾಹದ ನೀರನ್ನು ಕುಡಿದ ಅವರು ಶರಣಾಗತಿಗೆ ಸಿದ್ಧರಿದ್ದಿಲ್ಲ. ಪೋಪನ ಅಧಿಕಾರವನ್ನು ಪುನಃಸ್ಥಾಪಿಸಲೂ ಬಹಳ ತಡವಾಗಿತ್ತು. ಅದು ಈವರೆಗೆ ಜನರನ್ನು ಉಗ್ರವಾಗಿ ಪೀಡಿಸುತ್ತಿತ್ತು ಮತ್ತು ಬಿಡುಗಡೆಯ ಮತ್ತು ಫ್ರೆಂಚಿನ ವಿರುದ್ಧವಾದ

ಅದರ ಬಹಿಷ್ಕಾರವು ಅದರ ವಿರುದ್ಧವಾಗಿಯೇ ಪ್ರತಿಯಾಗಿ ವರ್ತಿಸಿತ್ತು. ಹೀಗಾಗಿ ಪೋಪನನ್ನು 'ಪವಿತ್ರ ಮೈತ್ರಿ'ಗೆ ಸೇರಿಕೊಳ್ಳುವಂತೆ ಅಹ್ವಾನಿಸಲೂ ಇಲ್ಲ. ಹಿಂದಿನಂತಾಗುತ್ತಿದ್ದರೆ, ಆತನೇ ಅದರ ಮುಖ್ಯಸ್ಥನಾಗುತ್ತಿದ್ದನು. ಈ ರೀತಿಯಲ್ಲಿ ಸ್ತ್ರೀ (ದೇವರ ಪ್ರಗತಿಪರ ಸಭೆ)ಯು ಸಹಾಯ ಹೊಂದಿತು, ವಿನಾಶವಾಗದಂತೆ ಕಾಪಾಡಲ್ಪಟ್ಟಿತು ಮತ್ತು ಸ್ವಾತಂತ್ರ್ಯ ಹಾಗೂ ಸತ್ಯವು ಮಾನವರ ಮುಂದೆ ಬಂದು ಪ್ರಾಮುಖ್ಯತೆಯಿಂದ ನಿಂತುಕೊಂಡವು; ಆ ಸಮಯದಿಂದ ಮುಂದಕ್ಕೆ ಬಿಡುಗಡೆಯ ಚೈತನ್ಯ ಮತ್ತು ದೇವರ ವಾಕ್ಯಗಳು ಅವನ್ನು ಅನುಸರಿಸುವವರನ್ನು ಹೆಚ್ಚು ಹೆಚ್ಚು ಬೆಳಕು ಮತ್ತು ಸತ್ಯಕ್ಕೆ ನಡೆಸುವುದಾಯಿತು.

ಅನಂತರ, ಇಲ್ಲಿ ನೀರಿನ ಪ್ರವಾಹವು ಪೋಪನ ಅಧಿಕಾರದ ಅಂತ್ಯ ಮತ್ತು 'ಕರ್ತನ ದಿನದ ಆರಂಭ' ಅಥವಾ 'ಅಂತ್ಯ ಕಾಲದ ಸಿದ್ಧತೆ' ಇವೆರಡನ್ನೂ ಗುರುತಿಸಿತು. ಈ ಪ್ರವಾಹದ ಮೇಲೆಯೇ ಕರ್ತನ ಸೇವಕನು ಪ್ರವಾದನೀಯವಾಗಿ ನಿಂತುಕೊಡು ಒಂದು ಕಾಲ, ಎರಡು ಕಾಲ ಮತ್ತು ಅರ್ಧ ಕಾಲ ಇವುಗಳ ಬಗ್ಗೆ ಪ್ರಕಟಿಸುವುದು ಕಂಡು ಬಂದಿತು. ಈ ಪ್ರಕಟನೆಯು "ಈ ಆಶ್ಚರ್ಯಕಾರಕ ಸಂಗತಿಗಳ ಅಂತ್ಯಕ್ಕೆ ಇನ್ನೆಷ್ಟು ದೂರವಿದೆ?'' ಎಂಬ ಪ್ರಶ್ನೆಗೆ ಉತ್ತರವಾಗಿ ಮಾಡಲ್ಪಟ್ಟಿತು. ಆಶ್ಚರ್ಯಕಾರಕ ಅಥವಾ ಅದ್ಭುತಗಳು ದಾನಿಯೇಲ 12:1–3ರಲ್ಲಿ ಹೇಳಿದ ಸಂಗತಿಗಳ ಬಗ್ಗೆ ಅಲ್ಲ, ಅವು ದೇವರ ರಾಜ್ಯಕ್ಕೆ ಸಂಬಂಧಪಟ್ಟವುಗಳು. ಅವುಗಳು ಅಪರೂಪವಾದವುಗಳಲ್ಲ, ಆದರೆ ನಿರೀಕ್ಷಿಸಿದವುಗಳು. ಅಪರೂಪದ ಸಂಗತಿಗಳು ಅಂದರೆ ಮಧ್ಯೆ ಬರುವ ಸಂಕಷ್ಟಗಳು, ಉಪದ್ರವಗಳು ಮತ್ತು ಕರ್ತನ ಪವಿತ್ರ ಜನರ ಶೋಧನೆಗಳು. ವಿಶೇಷವಾಗಿ ಆ ಸಮಯದಲ್ಲಿ ಮತ್ತು ವಿಚಿತ್ರವಾದ ಶಕ್ತಿ ಅಥವಾ ಕೊಂಬಿನ (ಪೋಪನ ಅಧಿಕಾರದ) ಪ್ರಾಬಲ್ಯತೆಯ ಫಲವಾಗಿ ನಡೆದವು. ಇದರ ಬಗ್ಗೆ ದಾನಿಯೇಲನು ಮೊದಲೇ ವಿಶೇಷ ವಿಚಾರಣೆ ಮಾಡಿದ್ದಾನೆ (ದಾನಿ. 7:19–22). ಪ್ರಶ್ನೆಯೇನೆಂದರೆ, ದೇವರು ಈ ಸತ್ಯಕ್ಕಾಗುವ ಆಶ್ಚರ್ಯಕರ ವ್ಯತಿರಿಕ್ತತೆಯನ್ನು, ಆತನ ಮಕ್ಕಳ ಮತ್ತು ಜನಾಂಗಕ್ಕೆ ಆಗುವ ಆಶ್ಚರ್ಯಕರವಾದ ವಂಚನೆಯನ್ನು ಎಷ್ಟರವರೆಗೆ ಅನುಮತಿಸುತ್ತಾನೆ? ಎಂಬುದಾಗಿತ್ತು. ಇದರ ಉತ್ತರವು ಪೋಪನ ಶಕ್ತಿಯ ಪರಿಮಾಣವನ್ನು, ನಿಶ್ಚಿತವಾಗಿ ಅದರ ಅಂತ್ಯ ಸಮಯವನ್ನು ನೀಡುತ್ತದೆ ಮತ್ತು "ಪವಿತ್ರ ಜನರ ಶಕ್ತಿಯ ಬಲವು ಮುರಿಯುವುದು (ಹೀಗೆ) ಕೊನೆಗೊಂಡಾಗ ಈ ಎಲ್ಲಾ ಅಪರೂಪದ ಸಂಗತಿಗಳು ಮುಕ್ತಾಯವಾಗುವವು".

ಐದನೆಯ ವಚನದಲ್ಲಿ, ದಾನಿಯೇಲನು ಪ್ರವಾಹದ ಎರಡೂ ಕಡೆ ಇರುವ ವ್ಯಕ್ತಿಗಳಿಗೆ "ಯಾವಾಗ ಈ ಅಪರೂಪದ ಸಂಗತಿಗಳು ಮುಕ್ತಾಯಗೊಳ್ಳುವುದು?" ಎಂದು ಇಬ್ಬರನ್ನೂ ಜಂಟಿಯಾಗಿ ಕೇಳುವವನಂತೆ ಕಾಣಿಸುತ್ತಾನೆ. ಪೋಪನ ಅಧಿಕಾರವು ಮುಕ್ತಾಯವಾದಾಗಲೂ, ಜನರು ಹಿಂದಿನಂತೆ ಈ ಉಪದ್ರವ ನೀಡುವ, ಜಜ್ಜಿಹಾಕುವ ಶಕ್ತಿಯು ನಿಜವಾಗಿಯೂ ಮುಕ್ತಾಯದ ಹಂತದಲ್ಲಿ ಇದೆಯೋ ಇಲ್ಲವೋ ಎಂಬ ಅನುಮಾನದಲ್ಲಿ ಇರುತ್ತಾರೆಂಬ ಸೂಚನೆಯು ತೋರಿಬರುತ್ತದೆ. ಬಲವು ಮುರಿದು ಹಾಕಿದ ಮೇಲೆಯೂ, ಅವರ ರಾಜ್ಯವನ್ನು ತೆಗೆದುಕೊಂಡ ಮೇಲೆಯೂ, ಅದು ನಾಶವಾಗುತ್ತಿರುವಾಗಲೂ, ಇತ್ತೀಚೆಗೆ 1870ರಲ್ಲಿ ಈ ಕೊಂಬುಗಳು ತನ್ನ 'ದೋಷಾತೀತ' ಬಗ್ಗೆ ದೊಡ್ಡ ದೊಡ್ಡ ಮಾತುಗಳು ಕೇಳಿಬಂದದ್ದನ್ನು ನಾವೀಗ ನೆನಪು ಮಾಡಿಕೊಳ್ಳುವುದು ಆಶ್ಚರ್ಯವೇನಲ್ಲ. ಭಕ್ತರನ್ನು ಪ್ರತಿನಿಧಿಸುವ ದಾನಿಯೇಲನು "ಆಗ ನೋಡುತ್ತಿರಲು ಇಗೋ, ಕೊಂಬು (ಅದರ ರಾಜ್ಯವು ಅಳಿದುಹೋದ ಮೇಲೆ ಅದು ಸತ್ಯವನ್ನು, ಪವಿತ್ರ ಜನರ ಅಧಿಕಾರವನ್ನು ಹತ್ತಿಕ್ಕಲು ಅದು ದೀರ್ಘಕಾಲದವರೆಗೆ ಶಕ್ತಿಹೀನವಾಗಿತ್ತು) ಬಡಾಯಿ ಕೊಚ್ಚಿಕೊಂಡ ನಿಮಿತ್ತ ಆ ಕೊಂಬಿನ ಮೃಗವನ್ನು (ಅದಕ್ಕೆ ಪವಿತ್ರ ಭಕ್ತರ ಮೇಲೆ ಮತ್ತು ಸತ್ಯದ ಮೇಲೆ ಯಾವ ಅಧಿಕಾರವೂ ಇರಲಿಲ್ಲ, ಆದರೆ ಅದು ಬೇರೊಂದು ರೀತಿಯಲ್ಲಿ ಪರಿಣಾಮ ಬೀರಿತು) ಅದನ್ನು ಕೊಂದು ಉರಿಯುವ ಬೆಂಕಿಗೆ ಹಾಕಿ ನಾಶಮಾಡಿದರು – ಸಾರ್ವತ್ರಿಕ ಅರಾಜಕತೆ" (ದಾನಿ. 7:11) ಎಂದಿದ್ದಾನೆ. ಇದುವೇ ಸರ್ವೇ ಸಾಮಾನ್ಯವಾದ ಅರಾಜಕತ್ವ. ಹಳೇ ರೋಮ್ ಚಕ್ರಾಧಿಪತ್ಯದಲ್ಲಿನ ಸರ್ಕಾರಗಳ ಅವಶೇಷಗಳ ನಾಶನವು ಆ ರಾಜ್ಯವು ಅಳಿದ ಮೇಲೂ ಪೋಪನ ದಾರಿತಪ್ಪಿಸುವ ಆಡಂಬರ ಮಾತುಗಳಿಂದ ಉಂಟಾಯಿತು ಎಂಬುದಾಗಿ ತೋರಿಸಲ್ಪಟ್ಟಿದೆ.

ಪೋಪನ ಅಧಿಕಾರದ ಅಂತ್ಯದ ಸಮಯವನ್ನು ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಸಂಭವಿಸಿತು ಎಂಬುದು ಸ್ಪಷ್ಟವಾಗಿರುವದಲ್ಲದೇ, ಕಂಡುಬಂದಂತೆ ಆ ರೀತಿಯಲ್ಲಿ ಸ್ಪಷ್ಟವಾಗಿ ನಿರ್ಧರಿಸಿಲ್ಲದ್ದರಿಂದಲೂ, ಮತ್ತು 1799ನ್ನು ಗುರುತಿಸುವ ದಾನಿಯೇಲ 11:40–44ರಲ್ಲಿ ಘಟನೆಗಳಿಂದಲೂ ನಾವು ಸಿದ್ಧವಾಗಿ ಪೋಪನ ಅಧಿಕಾರವು ಅಲ್ಲಿ ಪ್ರಾರಂಭವಾಯಿತೇನೋ ಎಂಬುದನ್ನು ತಿಳುಕೊಳ್ಳುವಂತೆ 1260 ವರ್ಷಗಳನ್ನು ಹಿಮ್ಮುಖವಾಗಿ ಅಳೆಯಬಹುದು. ನಾವು ಆ ರೀತಿಯಲ್ಲಿ ಪರಿಶೀಲಿಸೋಣ. ಅದು ಹಾಗೆಂದು ನಮಗೆ

ಕಂಡುಬಂದರೆ ನಮಗೆ ನಮ್ಮ ಪುರಾವೆಗಳು ನಂಬಿಕೆಯು ಕೇಳುವಂತೆ ಸ್ಪಷ್ಟ ಮತ್ತು ಬಲವುಳ್ಳವುಗಳೂ ಆಗುತ್ತವೆ. ನಾವು ಆ ರೀತಿಯಲ್ಲಿ ಪರಿಶೀಲಿಸೋಣ :–

ನಾವು, ಕ್ರಿ.ಶ. 1799 ರಿಂದ ಹಿಂದಕ್ಕೆ 1260 ವರ್ಷಗಳನ್ನು ಅಳತೆಮಾಡುವುದಾದರೆ ಕ್ರಿ.ಶ. 539ಕ್ಕೆ ಬರುತ್ತದೆ, ಅಲ್ಲಿ ಪೋಪನ ಅಧಿಕಾರವು ಪ್ರಾರಂಭವಾಯಿತೆಂದು ಹೇಳಬಹುದು. ಪೋಪನ ಪದ್ಧತಿಯು ರಾಜತಂತ್ರಗಳ ಮತ್ತು ಪೌರೋಹಿತ್ಯ ಐಹಿಕ ಧೋರಣೆಗಳ ಮಿಶ್ರಣವಾಗಿದೆ ಮತ್ತು ಅದು ಅಂಥಃ ಚಿಕ್ಕ ಮತ್ತು ಕ್ರಮೇಣವಾದ ಆರಂಭವನ್ನು ಮತ್ತು ಅಂತ್ಯವನ್ನು ಹೊಂದಿರುವುದರಿಂದ ವಿವಿಧ ರೀತಿಯ ಅಭಿಪ್ರಾಯಗಳು ಅದರ ಪ್ರಾರಂಭ ಮತ್ತು ಮುಕ್ತಾಯದ ಬಗ್ಗೆ ಇರುವುದು ಸಮಂಜಸವೆನಿಸುತ್ತದೆ ಮತ್ತು ಅದರ ಏಳು ಬೀಳುಗಳ ಬಗ್ಗೆ ನಮಗೆ ದೇವರ ನಿಗದಿತ ದಿನಾಂಕಗಳು ಸಿಗುವವರೆಗೆ ಮತ್ತು ಅವು ಎಷ್ಟು ಸರಿಯಾಗಿವೆ ಎಂಬುದನ್ನು ನೋಡಲು ಸಾಧ್ಯ. ಪೋಪನ ಅಧಿಕಾರವು ಸಭೆಯಲ್ಲಿ ಮತ್ತು ರಾಜ್ಯದ ವ್ಯವಹಾರಗಳಲ್ಲಿ ರಾಜಕೀಯವನ್ನು ಮಿಶ್ರ ಮಾಡಿತು ಮತ್ತು ಅದನ್ನು ವಿರೋಧಿಗಳು ಗ್ರಹಿಸುವವರೆಗೆ ಅತ್ಯುನ್ನತ ಮಟ್ಟವನ್ನು ಹಕ್ಕಿನಿಂದ ಪಡಕೊಂಡಿತ್ತು; ಅದು ನಾಗರೀಕ ಸಮಾಜದ ಅಧಿಕಾರಗಳ ಮೇಲೆಯೂ ಇದನ್ನು ಕಾರ್ಯಗತ ಗೊಳಿಸುವ ಪ್ರಯತ್ನವನ್ನು ಮಾಡಿತು, ಮತ್ತು ಪ್ರವಾದನೆಯು ಅದರ ಅಧಿಕಾರವು ಮುರಿದು ಬಿದ್ದಿದೆ ಮತ್ತು ಅದರ ಅಂತ್ಯವು ಪ್ರಾರಂಭವಾಗಿದೆ ಎಂದು ಹೇಳಿದ ಅವಧಿಯಿಂದಲೂ ಅದರ ಮುಖ್ಯಸ್ಥನು ದೋಷಾತೀತನು ಎಂದು ಪ್ರಕಟಿಸಿತು. ಆದರೆ ತಿಳಿಗೇಡಿತನ ಮತ್ತು ಮೂಢನಂಬಿಕೆಯ ಬಗ್ಗೆ ಪೂಜ್ಯಭಾವವು ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಮುರಿದು ಬಿದ್ದುದರ ನಿಮಿತ್ತ ಪೋಪನ ಅಧಿಕಾರವನ್ನು ಇಟಲಿಯ ರೋಮಾಜ್ಞ (Romagna) ಪ್ರಾಂತ್ಯದ ಜನರು ಮಾನ್ಯ ಮಾಡಿರಲಿಲ್ಲ. ಕೆಲವು ಸಮಯದಲ್ಲಿ, ಕ್ರಾಂತಿಗಳ ಮಧ್ಯದಲ್ಲಿ, ಪೋಪನು ಆ ರಾಜ್ಯಗಳಿಗೆ ಹೆಸರು ಮಾತ್ರದ ಆಡಳಿತಗಾರನಾಗಿ ಕುಳಿತುಕೊಂಡಿದ್ದರೂ, ಅದು ಕೇವಲ ಆಸ್ಟ್ರಿಯಾ ಅಥವಾ ಫ್ರಾನ್ಸಿನ ಪ್ರತಿನಿಧಿಯ, ವಿದೇಶಿ ಆಕ್ರಮಣಕಾರರಾಗಿ ಅವರ ಸೈನಿಕ ಗುಂಪುಗಳು ಆತನನ್ನು ಅಧಿಕಾರಸ್ಥಾನದಲ್ಲಿ ರಕ್ಷಿಸಿತು.

ಈಗ, ನಮಗೆ ಕ್ರಿ.ಶ. 539ರಲ್ಲಿ 1260 ವರ್ಷ ಕಾಲಾವಧಿಯು ಪ್ರಾರಂಭವಾಯಿತೆಂದು ತಿಳಿದಿರುವುದರಿಂದ, ಅದರ ಹಿಂದೆ ಯಾವುದೆಲ್ಲಾ ಮಾನ್ಯತೆ ಪಡೆದಿರಲಿಲ್ಲ ಎಂಬುದು ಕಂಡುಕೊಳ್ಳಲು ಸಮರ್ಥರಾಗುತ್ತೇವೆ. ಪೋಪನ ಅನುಯಾಯಿಗಳು ತಮ್ಮ ಅಧಿಕಾರದ ಪ್ರಾರಂಭವು ಕಾನ್ಸ್ಟಂಟೈನನ ಪರಿವರ್ತನೆಯ ನಂತರವೋ, ಕ್ರಿ.ಶ. 328ರಲ್ಲಿ ನಡೆದ ರೋಮ್ ಸಾಮ್ರಾಜ್ಯದ ಹೆಸರು ಮಾತ್ರದ ಕ್ರೈಸ್ತತ್ವಗೊಳಿಸುವಿಕೆ ದಿನದಿಂದಲೋ ಅಥವಾ ಕ್ರಿ.ಶ. 800 ರಲ್ಲಿ ಚಾರ್ಲ್‌ಮ್ಯಾಗ್ನೆ (Charlemagne) ಎಂಬಾತನು ಪೋಪನ ರಾಜ್ಯಗಳನ್ನು ದೃಢೀಕರಿಸಿ ದಂದಿನಿಂದಲೋ ಎಂದು ಗೊತ್ತುಪಡಿಸಲು ಒಲವುಳ್ಳವರಾಗಿದ್ದಾರೆ. ಆದಾಗ್ಯೂ ಕಾನ್ಸ್ಟಂಟೈನನು ಸಭೆಯನ್ನು ಸ್ವಾಧೀನ ಪಡಿಸಿಕೊಳ್ಳಲು ಪೌರಶಕ್ತಿ ಅಥವಾ ಹಕ್ಕು ಎಂಬುದಾಗಿ ಮಾನ್ಯ ಮಾಡಲಿಲ್ಲ ಎಂಬದು ಸತ್ಯ. ಇದಕ್ಕೆ ವ್ಯತಿರಿಕ್ತವಾಗಿ, ಆತನು ಕ್ರೈಸ್ತಧರ್ಮದ ಪರವಾಗಿದ್ದರೂ, ನಿಜವಾಗಿ ಹೇಳುವುದಾದರೆ ಕ್ರೈಸ್ತಸಭೆಯೇ ಆ ಚಕ್ರವರ್ತಿಯನ್ನು ಕನಿಷ್ಠ ಅದರ ಸಹಮುಖ್ಯಸ್ಥನನ್ನಾಗಿ ಮಾಡಿತ್ತು. ಹೀಗಾಗಿ ಸಭೆಯು ಪೌರರ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡಲು ಅನುಮತಿ ಇಲ್ಲದಿದ್ದರೂ, ಚಕ್ರವರ್ತಿಯು ಸಭಾಕೂಟಗಳನ್ನು ಕರೆದು ಸಭೆಯು ನಾಗರೀಕ ವ್ಯವಹಾರಗಳಲ್ಲಿ ಸಭೆಯ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಮಾಡುವವನಾದನು. 1260 ವರ್ಷಗಳ ಪ್ರವಾದನೀಯ ಅಳತೆಗೋಲಿನಲ್ಲಿ ಕ್ರಿ.ಶ. 539 ಎಂದು ತೋರಿಸಿದ ದಿನಾಂಕವು ಕ್ರಿ.ಶ. 328, ಇದು ಚಾರ್ಲ್‌ಮ್ಯಾಗ್ನೆ (Charlemagne) ಎಂಬಾತನು ಅದರ ಪೂರ್ಣ ಮತ್ತು ಸಮಗ್ರ ಅಧಿಕಾರದ ನಾಗರೀಕ ಮತ್ತು ಧಾರ್ಮಿಕ ಅಧಿಕಾರಗಳ ಮುಖ್ಯಸ್ಥನೆಂಬ ಮಾನ್ಯತೆಯನ್ನು ಕ್ರಿ.ಶ. 800ರಲ್ಲಿ ಪಡೆಯುವವರೆಗೆ ಇತ್ತು. ಸಭೆಯ ಮತ್ತು ಚಕ್ರಾಧಿಪತ್ಯದ ಒಟ್ಟುಗೂಡುವಿಕೆಯ ಬಹುಮಟ್ಟಿನ ನಡುಹಾದಿಯಾಗಿತ್ತು.

ಕಾನ್ಸ್ಟಂಟೈನನ ಕಾಲದಿಂದಲೂ ರೋಮಿನ ಬಿಷೋಪರುಗಳು ಪ್ರಪಂಚದ ಮುಂದೆ ಉನ್ನತವಾದ ಸ್ಥಾನವನ್ನು ಹೊಂದಿದ್ದರು. ಅವರು ದೀರ್ಘಕಾಲದವರೆಗೆ ಎಲ್ಲರ ಮೇಲೆ ಅಧಿಕಾರವನ್ನು ಹಕ್ಕಿನಿಂದ ಸಭೆಯವರಿಂದ ಮತ್ತು ಇತರ ಎಲ್ಲರಿಂದಲೂ ಸಾಧಿಸಲು ಸಹ ಪ್ರಾರಂಭಿಸಿದ್ದರು. ಯಾರಾದರೂ ಒಬ್ಬರನ್ನು ಸಭೆಯಲ್ಲಿ ಅಧಿಕಾರವುಳ್ಳವನೆಂದು ಅಥವಾ ಮುಖ್ಯಸ್ಥನೆಂದು ಪರಿಗಣಿಸಬೇಕೆಂಬುದಾಗಿಯೂ ಹಾಗೂ ರೋಮಿನ ಬಿಷೋಪರೇ ಅವರಾಗಬೇಕೆಂಬುದು ಅವರ ಹಕ್ಕೊಳಿಕೆಯಾಗಿತ್ತು. ಪೇತ್ರ ಮತ್ತು ಪೌಲರು ರೋಮಿನಲ್ಲಿ ಜೀವಿಸಿದರು, ಹೀಗಾಗಿ ರೋಮ್ ಅಪೊಸ್ತಲತನದ ಅಧಿಕಾರದ ಪೀಠವಾಗಿ ರಚಿತವಾಗಬೇಕು, ಮಾತ್ರವಲ್ಲದೆ, ರೋಮ್ ಬಹಳ ಕಾಲದವರೆಗೆ ಕೈಸರನ ಮತ್ತು ನಾಗರೀಕ ಅಧಿಕಾರಿಗಳ

ಆಸನ ಸ್ಥಾನವಾದುದರಿಂದ ಅದು ಜನರ ಮನಸ್ಸಿನಲ್ಲಿ ಅಧಿಕಾರದ ಸ್ಥಾನವೆಂಬ ಮನ್ನಣೆ ಪಡೆದಿತ್ತು.

ಹೇಗೂ, ಈ ಪ್ರಾಧಾನ್ಯತೆಯ ಮನವಿಯನ್ನು ಕೂಡಲೇ ಒಪ್ಪಿಕೊಳ್ಳಲಿಲ್ಲ. ಪೈಪೋಟಿಯ ಮನೋಭಾವವು ಪರದೇಶದಲ್ಲಿತ್ತು, ಇತರ ಮಹಾ ನಗರಲ್ಲಿದ್ದ ಬಿಷೋಪರುಗಳು ಸಹಾ ಲೋಕದ ಮುಂದೆ ಪ್ರಧಾನತೆಯ ಸ್ಥಾನವನ್ನು ಹೊಂದಲು ಹಕ್ಕೇಳಿಕೆಯನ್ನು ಮಂಡಿಸಿದರು. ಅವರು ಒಂದಲ್ಲ ಒಂದು ಕಾರಣದಿಂದ ಅಧಿಕಾರವನ್ನು ಪಡೆಯಬೇಕೆಂಬ ಹಕ್ಕೇಳಿಕೆ ಯುಳ್ಳವರಾಗಿದ್ದರು. ಹೀಗಾಗಿ ಕ್ರಿ.ಶ. 533ರ ಮೊದಲು ಚಕ್ರವರ್ತಿಯಾದ ಒಂದನೇ ಜಸ್ಟೀನಿಯನ್ನನು ರೋಮಿನ ಬಿಷೋಪನನ್ನು ಮಾನ್ಯ ಮಾಡುವವರೆಗೆ ಇದು ಸಾಧ್ಯವಾಗಿರಲಿಲ್ಲ. ಒಂದು ಬಿಸಿಯಾದ ಧಾರ್ಮಿಕ ಚರ್ಚೆಯಲ್ಲಿ ಚಕ್ರವರ್ತಿಯು ರೋಮಿನ ಬಿಷೋಪನ ಪರವಹಿಸಿದನು, ಆತನು ಕನ್ಯಾ ಮರಿಯಳ ಆರಾಧನೆ ಅರ್ಹವಾದುದು (Virgin Mary's worthiness of adoration) ಎಂದು ಪರಿಗಣಿಸಿದನು. ಈ ರೀತಿಯಲ್ಲಿ ಆತನು Eutychians ಮತ್ತು Nestoriansರೊಡನೆ ನಮ್ಮ ಕರ್ತನಾದ ಯೇಸುವಿನ ಸ್ವಭಾವವನ್ನು ಭಿನ್ನತೆ ಗೊಳಿಸಿದನು ಮತ್ತು ಬೆರಿಕೆ ಮಾಡಿದನು ಎಂಬ ವಿವಾದಕ್ಕೊಳಗಾದನು. ಈ ಚರ್ಚೆಯು ಸಭೆಯನ್ನು ವಿಭಾಗಗೊಳಿಸಬಹುದು. ಹಾಗಾಗಿ, ಆ ರೀತಿಯಲ್ಲಿ ಚಕ್ರಾಧಿಪತ್ಯವನ್ನೂ ವಿಭಜಿಸಬಹುದೆಂದು ಚಕ್ರವರ್ತಿಯು ಅಂಜಿದನು. ಆತನು ಅವು ಹೆಚ್ಚು ಭದ್ರವಾಗಿ ಅನ್ಯೋನ್ಯವಾಗಿರಬೇಕೆಂದು ಬಯಸಿದನು; ಆ ಮೊದಲ ಕಾಲದಲ್ಲಿಯೂ ನಾಮಾಂಕಿತ ಸಭೆಯು ಮತ್ತು ಚಕ್ರಾಧಿಪತ್ಯವೂ ರಾಜ್ಯವು ಕ್ರೈಸ್ತ ಸಾಮ್ರಾಜವಾಗಿ ಒಂದೇ ಆಗಿತ್ತು. ಈ ವಿವಾದವನ್ನು ಬಗೆಹರಿಸುವಂತೆ ಮತ್ತು ಜನರಿಗೆ ಯಾವುದನ್ನು ನಂಬಬೇಕು, ಯಾವುದನ್ನು ನಂಬಬಾರದು ಎಂದು ಹೇಳುವುದಕ್ಕಾಗಿ ಯಾವುದಾದರೂ ನಿರ್ದಿಷ್ಟ ಪ್ರಮಾಣದ ಅಧಿಕಾರವನ್ನು ಬಯಸಿ, ರೋಮಿನ ಬಿಷೋಪನು ಈಗಾಗಲೇ Popedom or Headship ಎಂಬ ಪ್ರಾಧ್ಯಾನ್ಯತೆ ಹೊಂದಿರುವನು, ಮತ್ತು ಬಹಳಷ್ಟು ಸಂಪ್ರದಾಯ ವಾದಿಯೂ ಆಗಿರುವುದನ್ನು, ಆತನು ಚಕ್ರವರ್ತಿ ಯೊಂದಿಗೆ ಈ ಪ್ರಶ್ನೆಗಳ ಬಗ್ಗೆ ಬಹಳಷ್ಟು ಸಾಮರಸ್ಯ ಹೊಂದಿದವನಾದ ಕಾರಣ ಜಸ್ಟೀನಿಯನ್ನನು, ದಾಖಲೆಗಳಿಂದ, Eutychians ಮತ್ತು Nestorians ಇವರುಗಳ ಸಿದ್ಧಾಂತಗಳನ್ನು ಖಂಡಿಸಿದನಲ್ಲದೆ, ರೋಮಿನ ಬಿಷೋಪನನ್ನು ಎಲ್ಲಾ ಪವಿತ್ರ ಸಭೆಗಳ ಮತ್ತು ಎಲ್ಲಾ ಪವಿತ್ರ ಪಾದ್ರಿಗಳ ಮುಖ್ಯಸ್ಥನೆಂದು ಸಂಬೋಧಿಸಿದನು ಮತ್ತು ಈ ರೀತಿಯಲ್ಲಿ ಆತನನ್ನು ಅಂಗೀಕರಿಸಿದನು. ಮಾತ್ರವಲ್ಲದೆ ನಾಸ್ತಿಕತೆಯನ್ನು ಅಡಗಿಸಲು ಹಾಗೂ ಸಭೆಗಳ ಅನ್ಯೋನ್ಯತೆಯನ್ನು ಸ್ಥಾಪಿಸಲು ಪೋಪನಿಗೆ ಸಹಾಯವಾಡಲು ಬಯಸಿದನು.

ಈ ರಾಜಾಜ್ಞೆಗೆ ಸಂಯೋಗವಾಗಿ, ಚಕ್ರವರ್ತಿಯು ರೋಮ್‌ನ ಪಿತೃಪ್ರಧಾನನಾದ ಪೋಪ್ ಜಾನ್‌ನನ್ನು ಈ ರೀತಿಯಾಗಿ ಸಂಬೋಧಿಸಿದನು :

"ವಿಜಯಶಾಲಿಯಾದ ಜಸ್ಟೀನಿಯನ್ನನು, ಧರ್ಮನಿಷ್ಟನೂ, ಅದೃಷ್ಟವಂತನೂ, ಸುವಿಖ್ಯಾತನೂ, ವಿಜಯೋತ್ಸಾಹಕನೂ, ಸದಾ ಉತ್ಕೃಷ್ಟನೂ ಆಗಿದ್ದು ಬಹಳವಾಗಿ ಬೆಳೆಯುತ್ತಿರುವ ರೋಮ್ ನಗರದ ಮಹಾ ಪವಿತ್ರ ಆರ್ಚ್ ಬಿಷೋಪ್ ಮತ್ತು ರೋಮ್‌ನ ಪಿತೃಪ್ರಧಾನರಾದ ಜಾನ್ ಎಂಬುವವರಿಗೆ. ತಮ್ಮ ಅಪೋಸ್ತೋಲಿಕ ಅಧಿಕಾರ (Apostalic See) ಸ್ಥಾನಕ್ಕೆ ಮತ್ತು ತಮ್ಮ ಪವಿತ್ರತೆಗೆ ಗೌರವ ಸಲ್ಲಿಸಿ (ಅದು ಯಾವಾಗಲೂ ಇತ್ತು ಮತ್ತು ಇರುವುದು ಎಂಬುದು ನಮ್ಮ ಅಭಿಲಾಶೆ), ತಂದೆಗೆ ಅನುರೂಪವಾದ ನಿಮ್ಮ ಆಶೀರ್ವಾದತನವನ್ನು ಗೌರವಿಸಿ, ನಾವು ಕ್ರೈಸ್ತ ಸಭೆಯ ಪರಿಸ್ಥಿತಿಗೆ ಸಂಬಂಧಪಟ್ಟ ಎಲ್ಲವುಗಳನ್ನೂ ತಮ್ಮ ಪವಿತ್ರತೆಯ ಗಮನಕ್ಕೆ ತ್ವರೆಪಡಿಸಿ ತಿಳಿಸುವುದೇನೆಂದರೆ, ನಿಮ್ಮ ಅಪೋಸ್ತೋಲಿಕ ಅಧಿಕಾರ ಮತ್ತು ದೇವರ ಪವಿತ್ರ ಸಭೆಗಳ ಅಧಿಕಾರಕ್ಕೆ ಸ್ಥಿರವಾಗಿ ನಿಲ್ಲುವಂತೆ ರಕ್ಷಿಸುವುದು ನಮ್ಮ ಸದಾ ಬಯಕೆಯಾಗಿರುವುದರಿಂದ ಅದು ಇನ್ನೂ ತನ್ನನ್ನು ಸಂರಕ್ಷಿಸಿಕೊಳ್ಳುತ್ತಿದೆ ಮತ್ತು ಅಲುಗಾಡದೆ ಸಹಿಸಿಕೊಂಡಿದೆ ಮತ್ತು ಅದರ ವಿರುದ್ಧವಾಗಿ ಯಾರೂ ಜಯಶಾಲಿಯಾಗರು. ಮತ್ತು ನಾವು ತಮ್ಮ ಪವಿತ್ರತೆಗೆ ಅಧೀನರಾಗಲು ಮತ್ತು ಸಮಗ್ರ ಪೌರ್ವಾತ್ಯ ಜಿಲ್ಲೆಗಳ ಎಲ್ಲಾ ಪಾದ್ರಿಗಳೂ ಅದರೊಂದಿಗೆ ಅನ್ಯೋನ್ಯಗೊಳ್ಳಲು ತ್ವರಿತಪಡಿಸುವವರಾಗಿದ್ದೇವೆ. ಪ್ರಸ್ತುತದಲ್ಲಿ, ಕ್ಷೋಭೆ ಯಲ್ಲಿರುವ ನಂತರದ ಸಂಗತಿಗಳು ಅವು ಎಷ್ಟೇ ಸಾಧಾರಣದವೂ, ನಿಶ್ಚಿತವಾದವುಗಳಾಗಿದ್ದರೂ, ಅವುಗಳು ಎಷ್ಟೇ ಭದ್ರವಾಗಿ ಸಂರಕ್ಷಿಸಲ್ಪಟ್ಟಿದ್ದರೂ, ತಮ್ಮ ಅಪೋಸ್ತಲಿಕತನದ ಸಿದ್ಧಾಂತಗಳ ಮೇರೆಗೆ ಎಲ್ಲಾ ಪಾದ್ರಿಗಳಿಂದ ಅವುಗಳು ಪ್ರಕಟಿಸಲ್ಪಟ್ಟಿದ್ದರೂ ಅವುಗಳನ್ನು ತಮ್ಮ ಅಪೋಸ್ತಲಿಕ ಅಧಿಕಾರದ ಗಮನಕ್ಕೆ ತರುವುದು ಅವಶ್ಯವೆಂದು ನಾವು ಭಾವಿಸುತ್ತೇವೆ. ಸಭೆಯ ಸ್ಥಿತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅವು ಎಷ್ಟೇ ಸಾಮಾನ್ಯ ಮತ್ತು ನಿಶ್ಚಿತವಾಗಿದ್ದರೂ ಅವು ಏಳುವುದನ್ನು ನಾವು ಅನುಮತಿಸುವುದಿಲ್ಲ. ಮತ್ತು ಅವುಗಳನ್ನು ಎಲ್ಲಾ ಸಭೆಗಳ ತಲೆಯಾಗಿರುವ ತಮ್ಮ ಪವಿತ್ರ ಸನ್ನಿಧಿಗೆ

ತಿಳಿಯಪಡಿಸುವುದಿಲ್ಲ. ಯಾಕೆಂದರೆ, ಎಲ್ಲಾ ಅಂಶಗಳಲ್ಲಿ (ಹೇಳಿರುವಂತೆ) ನಾವು ತಮ್ಮ ಅಧಿಕಾರ ಕ್ಷೇತ್ರದ ಗೌರವ ಮತ್ತು ಅಧಿಕಾರವನ್ನು ನಿಮ್ಮ ಗಮನಕ್ಕೆ ಸೇರಿಸಲು ಕಾತುರರಾಗಿದ್ದೇವೆ."

ಮುಂದಿನ ಪತ್ರವು ಕೆಲವೊಂದು ದೃಷ್ಟಿಕೋನ ಗಳನ್ನು ಉಲ್ಲೇಖಿಸುತ್ತದೆ ಮತ್ತು ಅವುಗಳು ಧರ್ಮದ್ರೋಹದ ವೈಖರಿ ಹೊಂದಿವೆ. ಮತ್ತು ಅವುಗಳು ಕ್ಷೋಭೆಯನ್ನುಂಟು ಮಾಡುವವುಗಳಾಗಿವೆ ಮತ್ತು ಚಕ್ರವರ್ತಿಯ ನಂಬಿಕೆಯನ್ನು ರೋಮಿನ ಸಭೆಯೊಂದಿಗೆ ಸಾಮರಸ್ಯವುಳ್ಳದ್ದಾಗಿ ನೀಡುತ್ತದೆ. ಅದು ಈ ರೀತಿಯಲ್ಲಿ ಮುಕ್ತಾಯಗೊಳ್ಳುತ್ತದೆ :

"ನಾವು ಈಗ ನಾಲ್ಕು ಪವಿತ್ರ ಕೌನ್ಸಿಲ್‌ಗಳ ಸಿಂಧುತ್ವವನ್ನು ಒಪ್ಪಿಕೊಳ್ಳುತ್ತೇವೆ. ಅವುಗಳೆಂದರೆ, ನೈಸಿಯದಲ್ಲಿ ಸೇರಿ ಬಂದ 318 ಪವಿತ್ರ ಫಾದರ್‌ಗಳ ಸಭೆ (ನೈಸ್‌ನ ಕೌನ್ಸಿಲ್) ಮತ್ತು ಈ ಪವಿತ್ರ ನಗರದಲ್ಲಿ ಕೂಡಿದ 140 ಫಾದರ್‌ಗಳ ಸಭೆ (ಕೌನ್ಸಿಲ್ ಆಫ್ ಕಾನ್ಸ್ಟಾಂಟಿನೋಪಲ್), ಎಫೆಸದಲ್ಲಿ ಮೊದಲು ಕೂಡಿದ ಪವಿತ್ರ ಫಾದರ್‌ಗಳ ಸಭೆ (ಕೌನ್ಸಿಲ್ ಆಫ್ ಎಫೆಸಸ್) ಮತ್ತು Chalcedonನಲ್ಲಿ ಕೂಡಿ ಬಂದ ಪವಿತ್ರ ಫಾದರ್‌ಗಳ ಸಭೆ (ಕೌನ್ಸಿಲ್ ಆಫ್ ಚಾಲ್ಸಿಡನ್) ಇದನ್ನು ನಮ್ಮ ಅಪೋಸ್ತೋಲಿಕ ಅಧಿಕಾರವು ಬೋಧಿಸುತ್ತದೆ ಮತ್ತು ದೃಢಪಡಿಸುತ್ತದೆ. ಆದುದರಿಂದ ನಿಮ್ಮ ಅಪೋಸ್ತಲಿಕ ಅಧಿಕಾರವು ಅನುಸರಿಸುವ ಎಲ್ಲಾ ಪಾದ್ರಿಗಳು ಆ ರೀತಿಯಾಗಿ ನಂಬುತ್ತಾರೆ ಮತ್ತು ಅರಿಕೆಮಾಡುತ್ತಾರೆ ಮತ್ತು ದೃಢಪಡಿಸುತ್ತಾರೆ. ನಾವು ಬಹಳವಾಗಿ ಆಶೀರ್ವದಿಸಲ್ಪಟ್ಟ ಬಿಷೋಪರುಗಳಾದ Hypatius ಮತ್ತು Demetrius ಇವರುಗಳ ಮೂಲಕ ನಿಮ್ಮ ಪವಿತ್ರತೆಯ ಗಮನಕ್ಕೆ ತರಲು ತ್ವರೆಪಡುವುದೇ ನೆಂದರೆ ಕೆಲವು ಸನ್ಯಾಸಿಗಳ (monks) ನೀಚತನದಿಂದ ಯೆಹೂದ್ಯ ರೀತಿಯಲ್ಲಿ Nestorius ಎಂಬುವನ ನಾಸ್ತಿಕತೆಯ ಅನುಸಾರವಾಗಿ ನಿರಾಕರಿಸಲ್ಪಟ್ಟ ಸಿದ್ಧಾಂತಗಳನ್ನು ತಮ್ಮ ಪವಿತ್ರತೆಯಿಂದ ಮರೆ ಮಾಡಲಾಗದು. ಆದುದರಿಂದ ನಮಗೂ ಮತ್ತು ಪವಿತ್ರ ನಗರದ ಬಿಷೋಪರುಗಳಿಗೂ, ಮತ್ತು ಪಿತೃಸಮಾನರಾದ ನಿಮ್ಮ ಸಹೋದರನಿಗೂ (ಯಾಕೆಂದರೆ ಆತನು ಸಹ ಪುತ್ರರಾದ ತಮಗೆ, ಅಪೋಸ್ತಲಿಕ ಅಧಿಕಾರಿಯಾದ ನಿಮ್ಮ ಆಶೀರ್ವಾದವನ್ನು ಎಲ್ಲಾ ಅಂಶಗಳಲ್ಲೂ ಅನುಸರಿಸಬೇಕೆಂದು ತ್ವರೆಪಡಿಸುತ್ತಾ ಬರೆದಿದ್ದಾನೆ). ಒಂದು ಪತ್ರವನ್ನು ಬರೆಯುವಂತೆ ತಮ್ಮ ಪಿತೃ ಆದರವನ್ನು ಬಯಸುತ್ತೇವೆ (ಬೇಡಿಕೊಳ್ಳುತ್ತೇವೆ). ಅದೇನೆಂದರೆ, ನಿಮ್ಮ ಪವಿತ್ರತೆಯು ಯಾವುದು ಪ್ರತಿಷ್ಠೆಹೊಂದಿದೆಯೋ ಅದನ್ನು ಅರಿಕೆಮಾಡುವವರನ್ನು ಅಂಗೀಕರಿಸುತ್ತದೆ ಮತ್ತು ಯೆಹೂದಿ ಮಾದರಿಯಲ್ಲಿ ನಿಜವಾದ ನಂಬಿಕೆಯನ್ನು ಅಲ್ಲಗಳೆದು ನಾಸ್ತಿಕತೆಯನ್ನು ಪ್ರದರ್ಶಿಸುವ ಧೈರ್ಯಮಾಡಿದವರನ್ನು ಖಂಡಿಸುತ್ತದೆ ಎಂಬುದನ್ನು ನೀವು ನಮಗೆ ಪ್ರಕಟಿಸಬೇಕು. ಈ ರೀತಿಯಲ್ಲಿ ನಿಮ್ಮೆಲ್ಲರ ಬಗ್ಗೆ ಮತ್ತು ನಿಮ್ಮ ಎಲ್ಲಾ ಅಧಿಕಾರ ಸ್ಥಾನದ ಅಧಿಕಾರಿಗಳ ಬಗ್ಗೆ ಇರುವ ಪ್ರೀತಿಯು ಹೆಚ್ಚಾಗಿ ಬೆಳೆಯುತ್ತದೆ ಮತ್ತು ಗೊಂದಲಕ್ಕೀಡಾಗಿದ್ದ ಪವಿತ್ರ ಸಭೆಗಳ ಅನ್ಯೋನ್ಯತೆಯು ನಿಮಗಾಗಿ ಕಾಪಾಡಲ್ಪಡುತ್ತದೆ. ಯಾಕೆಂದರೆ ನಿಮ್ಮ ಮೂಲಕ ಎಲ್ಲಾ ಹೆಚ್ಚು ಆಶೀರ್ವದಿತ ಬಿಷೋಪರುಗಳು ನಿಮ್ಮ ಪವಿತ್ರತೆಯ ನಿಷ್ಕಪಟ ಸಿದ್ಧಾಂತವನ್ನು ಕಲಿತಿರುತ್ತಾರೆ. ಅದರ ಅಂಶಗಳನ್ನು ನಿಮಗೆ ಉಲ್ಲೇಖಿಸಲಾಗಿದೆ. ನಾವೀಗ ನಿಮ್ಮ ಆಶೀರ್ವಾದತೆಯಿಂದ ನಮಗಾಗಿ ಪ್ರಾರ್ಥಿಸುವಂತೆ, ನಮಗೆ ಪರಲೋಕದ ರಕ್ಷಣೆಯನ್ನು ಒದಗಿಸಿ ಕೊಡುವಂತೆ ನಿಮ್ಮನ್ನು ವಿನಂತಿಸಿಕೊಳ್ಳುತ್ತೇವೆ.

ಪೋಪ್ ಜಾನ್ ಇದಕ್ಕೆ ದಿನಾಂಕ 24 ಮಾರ್ಚ್ ಕ್ರಿ.ಶ. 534ರಂದು ಉತ್ತರಿಸಿದ್ದಾರೆ. ಅದೇ ಸಂದರ್ಭದಲ್ಲಿ ಚಕ್ರವರ್ತಿಯು ಕಾನ್ಸ್ಟಂಟೈನಿನ ಪಿತೃ ಪ್ರಧಾನರಿಗೆ ಪತ್ರ ಬರೆಯುತ್ತಾನೆ. ಪತ್ರದ ಮೊದಲನೆಯ ಪರಿಚ್ಛೇಧವನ್ನು ನಾವು ನೀಡುವವರಾಗಿದ್ದೇವೆ :–

ಈ ರಾಜವೈಭವದ ನಗರದ ಪವಿತ್ರ ಮತ್ತು ಆಶೀರ್ವದಿತ ಆರ್ಚ್ ಬಿಷೋಪ್ ಮತ್ತು ಸಾರ್ವತ್ರಿಕ ಕ್ರೈಸ್ತ ಸಭೆಯ ಹಿರಿಯರಾದ ಎಫಿಫೇನಿಯಸ್ ಎಂಬುವವರಿಗೆ ಸಭೆಯ ಎಲ್ಲಾ ಪರಿಸ್ಥಿತಿಯನ್ನು ಪವಿತ್ರರಾದ ನಿಮಗೆ ತಿಳಿಸಲು ಬಯಸಿ, ನೀವು ಸಹ ಇವುಗಳನ್ನು ತಿಳಿದಿರಬೇಕೆಂದು ಒಡಂಬಡಿಸಿದಾಗ್ಯೂ ನಾವು ಈ ಕ್ರೈಸ್ತ ಸಭಾ ಸಾರಾಂಶವನ್ನು ಹಿಡುಕೊಳ್ಳುವುದು ಅಗತ್ಯವೆಂದು ನೆನೆಸುತ್ತೇವೆ ಮತ್ತು ಇದರ ಮೂಲಕವಾಗಿ ಯಾವ ಚಳುವಳಿಗಳು ಈಗಾಗಲೇ ಪ್ರಾರಂಭವಾಗಿದೆ ಎಂಬುದನ್ನು ಪ್ರಕಟಿಸುತ್ತೇವೆ. ಪವಿತ್ರ ಮತ್ತು ಕೈಥೋಲಿಕ್ ಸಭೆಯ ಕೆಲವರು ಧರ್ಮಶ್ರದ್ಧೆ ಇಲ್ಲದ, Eutychians ಮತ್ತು Nestorians ಇವರುಗಳ ನಾಸ್ತಿಕತೆಯನ್ನು ಅನುಸರಿಸುತ್ತಿದ್ದಾರೆ. ನಾವು ಒಂದು ಕ್ರೈಸ್ತ ಸಭಾ ಕಟ್ಟಳೆಯನ್ನು ಜಾರಿಗೆ ತಂದಿದ್ದೇವೆ (ಪವಿತ್ರರಾದ ತಾವು ತಿಳಿದಿರುವಂತೆ). ಅದರಲ್ಲಿ ನಾವು ನಾಸ್ತಿಕರ ಹುಚ್ಚುತನವನ್ನು ಖಂಡಿಸಿದ್ದೇವೆ. ನಾವು ಬದಲಾಯಿಸಿದ ಅಥವಾ ಬದಲಾಯಿಸಲಿರುವ ಯಾವುದೇ ರೀತಿಯಲ್ಲಿಯೂ, ಅಥವಾ ನಾವು ಸಭೆಯ ಯಾವುದೇ

ಸ್ಥಿತಿಯನ್ನು ದಾಟಿದ್ದು (ಪವಿತ್ರರಾದ ತಾವು ತಿಳಿದಿರುವಂತೆ) ಅದು ದೇವರ ಕೃಪೆಯಿಂದ, ಇನ್ನೂ ಕಾಪಾಡಲ್ಪಟ್ಟಿದೆ. ಆದರೆ ಎಲ್ಲಾ ರೀತಿಯಲ್ಲಿಯೂ ಅತ್ಯಂತ ಪವಿತ್ರ ಸಭೆಯ ಅನ್ಯೋನ್ಯತೆಯು ಅದರ ಪ್ರಧಾನ ಪವಿತ್ರರಾದ ಪುರಾತನ ರೋಮಿನ ಪೋಪರೊಂದಿಗೆ (ಅವರಿಗೆ ನಾವು ಇದೇ ರೀತಿಯಲ್ಲಿ ಬರೆದಿದ್ದೇವೆ) ಸಂರಕ್ಷಿಸಲ್ಪಟ್ಟಿದೆ. ಸಭೆಯ ಸ್ಥಿತಿಗೆ ಸಂಬಂಧಿಸಿದ ಈ ಯಾವುದೇ ಸಂಗತಿಗಳು ಆಶೀರ್ವಾದಕರರಾದವರಿಗೆ ತಲುಪದಿರುವುದನ್ನು ನಾವು ಸಹಿಸಿಕೊಳ್ಳುವವರಲ್ಲ. ಯಾಕೆಂದರೆ ಅವರು ದೇವರ ಎಲ್ಲಾ ಪವಿತ್ರ ಸಭೆಯ ಮುಖ್ಯಸ್ಥರಾಗಿದ್ದಾರೆ. ವಿಶೇಷವಾಗಿ ಈ ಕಾರಣದಿಂದಲೂ, ನಾಸ್ತಿಕರು ಆ ಭಾಗಗಳಲ್ಲಿ ಹರಡಿಕೊಂಡಿರುವುದರಿಂದಲೂ ಅವರನ್ನು ಆ ಮಾನ್ಯ ಬೀಷೋಪರ ಅಧಿಕಾರ ಕ್ಷೇತ್ರದ ವಿವೇಕಯುತ ಮತ್ತು ನೀತಿಯುತ ನಿರ್ಧಾರಗಳಿಂದ ದಮನಗೊಳಿಸಿದ್ದೇವೆ. (ಅಕ್ಷರಶಃ ಮರದ ಚಿಗುರೋ ಎಂಬಂತೆ ತರಿದುಹಾಕಿದ್ದೇವೆ).

ನಾವು ಪತ್ರಗಳಿಂದ ಆಯ್ದ ಮುಂದಣ ಸಂಗತಿಗಳು ನಾಗರೀಕ ನಿಯಮಗಳ ಸಂಪುಟದಲ್ಲಿರುವ ಜಸ್ಟೇನಿಯನ್ನನ ಕಟ್ಟಳೆಗಳೊಂದಿಗೆ ಪೂರ್ಣವಾಗಿ ಕಂಡು ಬರಬಹುದು – Codicis lib I.tit,i.

ಪೋಪನ ಅಧಿಕಾರದ ಹಕ್ಕೇಳಿಕೆಯ ಮೊದಲನೇ ಅಧಿಕಾರಯುಕ್ತ ಅಂಗೀಕಾರವು ನಂತರದಲ್ಲಿ ಹೆಚ್ಚು ಹೆಚ್ಚಾಗಿ ಅರಿಕೆಮಾಡಲ್ಪಟ್ಟವು ಎಂಬುದನ್ನು Phocus ಮತ್ತು ಆತನ ಉತ್ತರಾಧಿಕಾರಿ ಚಕ್ರವರ್ತಿಗಳು ಸೂಚಿಸಿದರು.

ಆದರೆ ಆಡಳಿತಗಾರನೆಂದು ಅಂಗೀಕರಿಸಿದ ಮೇಲೆಯೂ, ಪಾದ್ರಿ ವೃತ್ತಿಯ ಚಕ್ರವರ್ತಿಗೆ ಆ ಸಮಯಕ್ಕೆ ಅದು ಪೋಪನ ಅಧಿಕಾರಕ್ಕೆ ಖಾಲಿ ಹೆಸರಿಗಿಂತ ಮಿಗಿಲಾಗಿ ವಿಶೇಷವಾದ ಅನುಕೂಲ ಆಗಿರಲಿಲ್ಲ; ಯಾಕೆಂದರೆ ಜಸ್ಟೇನಿಯನ್ನನ ರಾಜಧಾನಿಯು ಕಾನ್ಸ್ಟಾಂಟಿನೋಪಲ್ ಆಗಿದ್ದರಿಂದ ಆತನು ರೋಮಿನಿಂದ ದೂರವಿದ್ದನು. ರೋಮ್, ಸಾಮಾನ್ಯವಾಗಿ ಇಟಲಿಯು ಆಸ್ಟ್ರೋಗೋತ್ಸ್ (Ostrogoths) ಎಂಬ ಮತ್ತೊಂದು ರಾಜ್ಯದ ಪ್ರಭುತ್ವದಲ್ಲಿತ್ತು. ಅವರು ರೋಮಿನ ಬಿಷೋಪರನ್ನು ಪ್ರಧಾನ ಕ್ರೈಸ್ತಗುರುವನ್ನಾಗಿ ಅಂಗೀಕರಿಸಿರಲಿಲ್ಲ. ಯಾಕೆಂದರೆ ಅವರು ನಂಬಿಕೆಯಲ್ಲಿ ಏರಿಯನ್ ಪಂಥದವರಾಗಿದ್ದರು. ಆದುದರಿಂದ ಪೋಪನ ಅಧಿಕಾರವು ಹೆಸರಿಗೆ ಮಾತ್ರವೇ ಚಕ್ರವರ್ತಿಯಿಂದ ಮಾನ್ಯತೆ ಹೊಂದಿದ್ದು, ಆಸ್ಟ್ರೋಗೋತ್ಸ್ ರಾಜಪ್ರಭುತ್ವ (Ostrogothic Monarchy) ಪತನವಾಗುವವರೆಗೆ ಹೆಸರಿನಲ್ಲಿ ಮಾತ್ರವೇ ಘನತೆಯುಳ್ಳದ್ದಾಗಿಯೂ, ಸವಲತ್ತುಗಳುದ್ದಾಗಿಯೂ ಇತ್ತು. ನಂತರ ಅದರ ಘನತೆಯು ಸಂಗತಿಯಾಯಿತು. ನಿಜವಾಗಿಯೂ, ಪೂರ್ವನಿಯೋಜಿತ ವ್ಯವಸ್ಥೆಯೋ ಎಂಬಂತೆ ಚಕ್ರವರ್ತಿಯು ಒಮ್ಮೆಲೇ ಕ್ರಿ.ಶ. 534ರಲ್ಲಿ ಬೆಲಿಸಾರಿಯಸ್ (Belisarius) ಎಂಬಾತನನ್ನು ಮತ್ತು ಸೈನ್ಯವನ್ನು ಇಟಲಿಗೆ ಕಳುಹಿಸಿದನು. ಮತ್ತು ಪೋಪನು ಚಕ್ರವರ್ತಿಯಿಂದ ಮಾನ್ಯ ಮಾಡಲ್ಪಟ್ಟ ಆರು ವರ್ಷಗಳ ನಂತರ, ಆಸ್ಟ್ರೋಗೋತ್ಸ್ (Ostrogothis)ನ ಅಧಿಕಾರವನ್ನು ಪರಾಭವಗೊಳಿಸಲಾಯಿತು ಮತ್ತು ಅವರ ಅರಸ Vitiges ಮತ್ತು ಆತನ ಸೈನ್ಯದ ಸಾರವನ್ನು ಲೂಟಿಯ ರಾಶಿಯೊಂದಿಗೆ ಜಸ್ಟೇನಿಯನ್ನನ ಪಾದಗಳ ಬಳಿಗೆ ಕೊಂಡೊಯ್ಯಲಾಯಿತು. ಇದು ಕ್ರಿ.ಶ. 539ರಲ್ಲಿ ನಡೆದದ್ದು. ಅದುದರಿಂದ, ಅದು ಸಮಯದ ಅಂಶವಾಗಿದ್ದು ಅಂದಿನಿಂದ ನಾವು "ಹಾಳು ಮಾಡುವ ಅಸಹ್ಯ ವಸ್ತುವು ಪರಿಶುದ್ಧ ಸ್ಥಳದಲ್ಲಿ ನಿಂತಿರುವ" (ಮತ್ತಾಯ 24:15, ಮಾರ್ಕ 13:14) ಕಾಲವನ್ನು ಎಣಿಕೆ ಮಾಡಬೇಕು. ಆಗ ಪೋಪನ ಅಧಿಕಾರವು ಚಿಕ್ಕದಾಗಿ ಪ್ರಾರಂಭವಾಯಿತು. ದಾನಿಯೇಲನ ಪ್ರವಾದನೆಯಲ್ಲಿ ಕಂಡುಬರುವ ಚಿಕ್ಕ ಕೊಂಬು (ದಾನಿ. 7:8,11, 20–22,25) ರೋಮಿನ ಮೃಗದ ಮೇಲೆ ಆಗ ತಾನೇ ಮೊಳಿಯಲು ಪ್ರಾರಂಭಿಸಿತು. ಅದು ತನ್ನ ಬೇರನ್ನು ರೂಪಗೊಳಿಸಲು ಎರಡು ಶತಮಾನಗಳ ಹಿಂದೆಯೇ ಪ್ರಾರಂಭಿಸಿತು, ಮತ್ತು ಎರಡು ಶತಮಾನಗಳ ಹಿಂದೆ ಸಣ್ಣದಾಗಿ ಕಾಣಿಸಿಕೊಂಡು ನಂತರ ಅದು ಅದರ ಇತರ ಕೊಂಬುಗಳಿಗಿಂತ ಶಕ್ತಿಯುತವಾಯಿತು. ಹಳೆಯ ಭೂಪ್ರದೇಶದ ಅಧಿಕಾರಿಗಳಿಗಿಂತ ಮತ್ತು ಶಕ್ತಿಗಳಿಗಿಂತ ಅದು ಬಹಳ ಪ್ರಬಲವಾಯಿತು. ಅದರ ಕಣ್ಣುಗಳು ಮತ್ತು ಬಾಯಿಯು ಬಹಳ ಸೊಕ್ಕಿನ ಮಾತುಗಳನ್ನು ಆಡುತ್ತಾ ಬೆಳೆಯತೊಡಗಿದವು ಮತ್ತು ಇತರೆ ಕೊಂಬುಗಳ ಮೇಲೆ ಶ್ರೇಷ್ಠತ್ವವುಳ್ಳದ್ದಾಗಿತ್ತು ಮತ್ತು ಹಾಗೆ ಮಾಡಲು ತನಗೆ ದೈವಿಕ ಹಕ್ಕು ಇದೆ ಎಂದು ಹೇಳಿಕೊಳ್ಳುತ್ತಿತ್ತು.

ಪ್ರವಾದಿಯು ಈ ವಿಚಿತ್ರವಾದ ಕೊಂಬಿಗೆ ಅಥವಾ ಅಧಿಕಾರಕ್ಕೆ ಆಸ್ಪದ ಅಥವಾ ದಾರಿ ಸಿದ್ಧಮಾಡಿಕೊಡಲು ಈ ಮೂರುಕೊಂಬುಗಳು ಬುಡ ಸಮೇತ ಕೀಳಲ್ಪಡುತ್ತವೆ ಎಂದಿದ್ದಾನೆ. ಅದರಂತೆ ನಾವು ಕಾಣುತ್ತೇವೆ: ಕಾನ್ಸ್ಟಂಟೈನನು ಕಾನ್ಸ್ಟಾಂಟಿನೋಪಲನ್ನು ಕಟ್ಟಿದನು, ಮತ್ತು ಆತನ ರಾಜಧಾನಿಯನ್ನು ಆ ಸ್ಥಳಕ್ಕೆ ತೆಗೆದುಕೊಂಡು ಹೋದನು. ಇದು ಕೈಸರನ ಸ್ಥಾನದಲ್ಲಿ

ಪೋಪನ ಅಧಿಕಾರಕ್ಕೆ ಅನುಕೂಲಕರವಾದರೂ, ಚಕ್ರಾಧಿಪತ್ಯಕ್ಕೆ ಅನಾನುಕೂಲಕರವಾಗಿತ್ತು. ಕೂಡಲೇ ಅವರು ರಾಜ್ಯವನ್ನು ವಿಭಾಗಮಾಡುವ ಯುಕ್ತತೆಯನ್ನು ಕಂಡುಕೊಂಡರು. ಅಂದಿನಿಂದ ಇಟಲಿಯು ಪಶ್ಚಿಮಾತ್ಯ ರಾಜ್ಯವೆಂದು ಪ್ರಸಿದ್ಧವಾಯಿತು. ಅದರ ಅಧಿಕಾರ ಸ್ಥಾನ ಅಥವಾ ರಾಜಧಾನಿಯು ರಾವೆನ್ನಾ Revennaದಲ್ಲಿ ಆಯಿತು. ಇದು ಕೊಂಬುಗಳಲ್ಲಿ ಒಂದಾಗಿತ್ತು. ಅದು ಕ್ರಿ.ಶ. 476 ರಲ್ಲಿ ಹೆರುಲಿ (Heruli) ಎಂಬುವವನ ಕೈಯಿಂದ ಪತನಗೊಂಡಿತು. ಇದು ಇನ್ನೊಂದು ಕೊಂಬಾಗಿದ್ದು ಅದರ ವಿನಾಶದ ಮೇಲೆ ಸ್ಥಾಪಿತವಾಯಿತು. ನಂತರದಲ್ಲಿ ಆಸ್ಟ್ರೋಗೋತಿಕ್ (Ostrogothic) ರಾಜ್ಯವು ಬಂದಿತು. ಇದು ಮತ್ತೊಂದು ಕೊಂಬಾಗಿದ್ದು ಹೆರುಲಿ (Heruli)ಯನ್ನು ಸೋಲಿಸಿತು ಮತ್ತು ತನ್ನನ್ನು ಕ್ರಿ.ಶ. 489ರಲ್ಲಿ ಇಟಲಿಯನ್ನು ಆಳುವುದಾಗಿ ಸ್ಥಾಪಿತಗೊಳಿಸಿತು. ನಾವೀಗ ತಾನೇ ನೋಡಿದಂತೆ, ಈ ಕೊಂಬಿನ (ಪೋಪನ ಕೊಂಬಿಗೆ ದಾರಿ ಮಾಡಿಕೊಡಲು ಕಿತ್ತುಹಾಕಲ್ಪಡುವ ಮೂರನೆಯದು) ಅಧಿಕಾರಾವಧಿಯಲ್ಲಿ ಜಸ್ಟೀನಿಯನ್ನನು ಪೋಪನ ಶ್ರೇಷ್ಟತೆಯನ್ನು ಅಂಗೀಕರಿಸಿದನು. ಆತನ ಅಪ್ಪಣೆಯ ಪ್ರಕಾರವಾಗಿ, ಆತನ ಸೇನಾಧಿಕಾರಿ ಮತ್ತು ಸೈನ್ಯದಿಂದಲೇ ಅದು ಕಿತ್ತುಹಾಕಲ್ಪಟ್ಟಿತು. ಅದರ ಕೀಳೋಣವು ಪೋಪನ ಅಧಿಕಾರವು ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳ ವಿಚಿತ್ರವಾದ ಬೆರಿಕೆಯಾಗಿ, ಅದರ ಇತರೆ ಸಂಗಡಿಗರಿಗಿಂತ ವಿಚಿತ್ರವಾದ ಕೊಂಬಾಗಿ ಮುಂದುವರಿಯುವುದು ಅಗತ್ಯವಾಗಿತ್ತೆಂದು ನಾವು ಕಂಡಿದ್ದೇವೆ. ನಿಜವಾಗಿಯೂ ಈ ಮೂರು ಕೊಂಬುಗಳ ಅಥವಾ ಅಧಿಕಾರಗಳ ಪತನಕ್ಕೆ ಪೋಪನ ಅಧಿಕಾರವು ರಹಸ್ಯವಾಗಿ ಕಾರಣವಾಗಿತ್ತು ಎಂಬುದು ಅಸಂಭವವಲ್ಲ. ಈ ರೀತಿಯಾಗಿ ಅದು ತನ್ನ ಉನ್ನತಿಗೆ ಹಾದಿಯನ್ನು ನಿರೀಕ್ಷಿಸಿತು, ಇದು ಅಂತಿಮವಾಗಿ ಫಲಿಸಿತು.

ಆಸ್ಟ್ರೋಗೋತ್ಸ್ (Ostrogoths)ನನ್ನು ಪರಾಭವ ಗೊಳಿಸುವುದರೊಂದಿಗೆ ರೋಮಿನ ಚಕ್ರವರ್ತಿಯು ಕೆಲವು ಸಮಯದವರೆಗೆ ಇಟಲಿಯನ್ನು ಆಳುವವನಾಗಿ ಮಾನ್ಯತೆ ಪಡೆದನು ಮತ್ತು ಎಕ್ಸಾರ್ಚ್ (Exarchs) ಎಂಬಾತನು ಅವನನ್ನು ಪ್ರತಿನಿಧಿಸಿದನು: ಆದರೆ ಇವುಗಳಿಗೆ ರಾವೆನ್ನಾ (Revenna)ವು ರಾಜಧಾನಿ ಯಾಗಿದ್ದು, ರೋಮ್‌ನಲ್ಲಿ ಅಲ್ಲ. ಅವರು ಪೋಪನ ಅಧಿಕಾರವನ್ನು ತೋರಿಸಿದ ರೀತಿಯಲ್ಲಿ ಅಂಗೀಕಾರ ಮಾಡಲು ಬಂದಿರುವುದರಿಂದ, ಅದು ಕ್ರಿ.ಶ. 539ರಿಂದ ಪೋಪನ ಅಧಿಕಾರವು ರೋಮ್ ನಗರದಲ್ಲಿ ಪರಮಾಧಿಕಾರವಾಗಿ ಮುಂದುವರೆಯಿತು; ಆ ದಿನಾಂಕದಿಂದ (ಅದು ರಚನೆಯಾದಂದಿನಿಂದ) ಅದು ವ್ಯವಸ್ಥಿತವಾಗಿ ಬೆಳೆಯತೊಡಗಿತು ಮತ್ತು ಉಳಿದ ಕೊಂಬುಗಳ ಮಧ್ಯೆ ಅಧಿಕಾರದ ಕೊಂಬಾಗಿ ವೃದ್ಧಿ ಹೊಂದಿ ಹಿಂದಿನ ರೋಮಿನ ಸಂಘಟಿತ ಅಧಿಕಾರವನ್ನು ಪ್ರತಿನಿಧಿಸಿತು. ಹೆಚ್ಚಾಗಿ ತೊಂದರೆಗೀಡಾದ ಇಟಲಿಯ ಪರಿಸ್ಥಿತಿ, ಮುಖ್ಯವಾಗಿ ರೋಮಿನ ಪರಿಸ್ಥಿತಿಯ ಈ ಅವಧಿಯಲ್ಲಿ ತೊಂದರೆಗೆ ಈಡಾಗುವ ಕಾರಣವು, ಉತ್ತರದಿಂದ ಬಂದ ಆಕ್ರಮಣಗಾರರ ಸುಲಿಗೆಗಳಿಗೆ ಮತ್ತು ಆ ಕಾಲದಲ್ಲಿ ಹತ್ತಿರದಲ್ಲಿದ್ದ ಪ್ರಭುಗಳ ಅಧಿಕವಾದ ಕರಗಳಿಗೆ ವಶವಾಯಿತು ಮತ್ತು ಇದು ಕಾನ್ಸ್ಟಾಂಟಿನೋಪಲಿನ ಸಾರ್ವಭೌಮಿಕ ಅಧಿಕಾರಕ್ಕೆ ರಾಜಕೀಯ ನಿಷ್ಠೆಯಲ್ಲಿ ಬಿರುಕನ್ನುಂಟು ಮಾಡಲು ಸಹಾಯ ಮಾಡುವುದಾಯಿತು; ಇದರಿಂದ ಅವರೊಂದಿಗೆ ಸದಾ ಇರುತ್ತಿದ್ದ ಕ್ರೈಸ್ತ ಸಭಾ ಆಡಳಿತಗಾರರು ಅದೇ ಭಾಷೆಯನ್ನು ಮಾತನಾಡುವವರು ಮತ್ತು ಅವರ ಅನುಕೂಲತೆಗಳನ್ನೂ ನಷ್ಟಗಳನ್ನೂ ಹಂಚಿಕೊಂಡವರು ಇವರನ್ನು ಜನರು ತಮ್ಮ ಸಲಹೆಗಾರರೂ, ರಕ್ಷಿಸುವವರೂ ಮತ್ತು ಹಳೇ ರೋಮಿನ ಅದರ ಸುತ್ತಮುತ್ತಲನ್ನು ಆಳ್ವಿಕೆ ಮಾಡುವವರೂ ಸರಾಗವಾಗಿ ಸ್ವೀಕರಿಸಲ್ಪಟ್ಟರು.

ರೋಮಿನ ಬಿಷೋಪನು ಉಳಿದವರಿಗಿಂತ ಉನ್ನತವೆಂದು ಪರಿಗಣಿಸಬೇಕೆಂದು ರೋಮಿನ ಬಿಷೋಪರ ಹಕ್ಕೊಳಿಕೆಗಳನ್ನು ಅಂಗೀಕರಿಸುವ ಜಸ್ಟೀನಿಯನ್ನನ ಉದ್ದೇಶವು ಆತನು ಆಸ್ಟ್ರೋಗೋತ್ಸ್ (Ostrogoths)ನ ಮೇಲೆ ನಡಿಸಲಿದ್ದ ಯುದ್ಧಕ್ಕೆ ಸಹಕಾರ ಗಳಿಸಿ ಇಟಲಿಯನ್ನು ಪೂರ್ವ ರೋಮ್ ಸಾಮ್ರಾಜ್ಯದ ಭಾಗವನ್ನಾಗಿ ಮಾಡಿಕೊಳ್ಳುವುದು ಆಗಿತ್ತು ಎಂಬುದು ನಿಸ್ಸಂಶಯ. ಯಾಕೆಂದರೆ ಪೋಪನ ಮತ್ತು ಕ್ರೈಸ್ತ ಸಭೆಯ ಶಿಫಾರಸ್ಸುಗಳನ್ನು ಯಾವುದೇ ರೀತಿಯಲ್ಲಿ ಆಗಲೂ ಸಹ ಅಲ್ಲಗಳೆಯಲಾಗುತ್ತಿದ್ದಿಲ್ಲ; ಯುದ್ಧದಲ್ಲಿ ಅವರನ್ನು ತನ್ನ ಕಡೆಗೆ ಪಡಕೊಳ್ಳುವುದೆಂದರೆ ಪ್ರಾರಂಭ ದಲ್ಲಿಯೇ ಅರ್ಧ ಗೆಲುವುಪಡಕೊಂಡಂತೆಯೇ.

ಆದಾಗ್ಯೂ ಗೋತರು ಚಕ್ರಾಧಿಪತ್ಯದ ವಿರುದ್ಧವಾಗಿ ತಿರುಗಿಬಿದ್ದು ರೋಮನ್ನು ಸೂರೆ ಮಾಡಿದರೂ ಅವರು ತಮ್ಮ ಆಳ್ವಿಕೆಯನ್ನು ಅಲ್ಲಿ ಪುನಃಸ್ಥಾಪಿಸಲಿಲ್ಲ. ಅವರ ಒಂದೇ ಸರ್ಕಾರವು ಕ್ರೈಸ್ತ ಸಭೆಯದಾಗಿತ್ತು, ಲೊಂಬಾರ್ಡ್ ರಾಜ್ಯವು ಕೂಡಲೇ ಒಳಬಂದು ತನ್ನ ಆಳ್ವಿಕೆಯನ್ನು ಇಟಲಿಯ ಹೆಚ್ಚು ಭಾಗಗಳಲ್ಲಿ ಸ್ಥಾಪಿಸಿದರೂ, ಜಸ್ಟೀನಿಯನ್ನನ್ನು ಎಕ್ಸಾರ್ಚ್ (Exarchs) ಮೂಲಕ ಸ್ಥಾಪಿಸಿದ್ದ ಪೂರ್ವ ಚಕ್ರಾಧಿಪತ್ಯವನ್ನು ಪದಚ್ಯುತಿಗೊಳಿಸಿದರೂ ಜಾಗರೂಕತೆಯಿಂದ ಗಮನಿಸ

ಬೇಕಾದುದೆಂದರೆ ಲೊಂಬಾರ್ಡ್‌ನವರು ರೋಮಿನಲ್ಲಿ ಪೋಪನ ಅಧಿಕಾರವನ್ನು ಮಾನ್ಯ ಮಾಡಿದರು. ಅದು ಎಂಟನೆಯ ಶತಮಾನದಲ್ಲಿ ಆ ರಾಜ್ಯವು ಅಂತ್ಯವಾಗುವವರೆಗೆ ಪೋಪನ ಅಧಿಕಾರದ ಮೇಲೆ ಯಾವುದೇ ಕಠಿಣ ರೀತಿಯ ಆಕ್ರಮಣಗಳು ನಡೆಯಲಿಲ್ಲ, ಅವರು ಕಾನ್ಸ್ಟಾಂಟಿಲೋಪಿನ ಸರಕಾರವನ್ನು ರಕ್ಷಿಸುವ ಹಕ್ಕೇಳಿಕೆಯನ್ನು ಅದು ಅವರಿಗೆ ಅನುಕೂಲಕರ ವಾಗಿರುವವರೆಗೆ ನೀಡಿದರೂ, ಅದರ ವೃತ್ತಾಂತವು ಪ್ರತಿಯಾಗಿ ಪೋಪರು ರೋಮನ್ನು ನಿಜವಾಗಿ ಆಳ್ವಿಕೆಮಾಡುವವರು "ಕೈಸರನ ಉತ್ತರಾಧಿಕಾರಿಗಳು", "ಆತ್ಮೀಕ ಕೈಸರರು" ಎಂಬುದನ್ನು ಸ್ಥಿರಪಡಿಸುತ್ತದೆ. ಲೊಂಬಾರ್ಡರುಗಳು ಅಂತಿಮವಾಗಿ ರೋಮನ್ನು ತಮ್ಮ ವಶಕ್ಕೆ ಪಡಕೊಳ್ಳಲು ಬಯಸಿದಾಗ ಪೋಪನು ಫ್ರೆಂಚ್ ಅರಸನಿಗೆ "ಕ್ರೈಸ್ತ ಸಭೆಯನ್ನು (ಪೋಪನ ಅಧಿಕಾರವನ್ನು) ಕಾಪಾಡುವಂತೆ ಮತ್ತು ಅದನ್ನು ಅವರ ದೀರ್ಘಕಾಲದ ಮಧ್ಯಪ್ರವೇಶವಿಲ್ಲದ ನಿಯಂತ್ರಣದಲ್ಲಿ ನಡಿಸಿಕೊಂಡು ಹೋಗುವಂತೆ ಮನವಿ ಮಾಡಿಕೊಂಡನು. ಅದನ್ನು ಅವರು "The Patrimony of St Peter" ಎಂದು ಕರೆಯುತ್ತಾರೆ ಮತ್ತು ಅದನ್ನು ಕಾನ್ಸ್ಟಂಟೈನನು ಸಭೆಗೆ ದಯಪಾಲಿಸಿದ್ದಾನೆಂದು ಅವರು ಹೇಳಿಕೊಳ್ಳುತ್ತಾರೆ.*

ಫ್ರೆಂಚ್ ಅರಸರುಗಳಾದ ಪೆಪಿನ್ (Pepin) ಮತ್ತು ಚಾರ್ಲೆಮ್ಯಾಗ್ನೆ (Charlemagne) ಎಂಬುವವರು ಒಬ್ಬರ ನಂತರ ಒಬ್ಬರು ತಮ್ಮ ಸೈನ್ಯವನ್ನು ಪೋಪನ ರಾಜ್ಯದ ರಕ್ಷಣೆಗೆ ತರುವವರಾದರು ಮತ್ತು ಲೊಂಬಾರ್ಡ್ಸ‌ರನ್ನು ಸೋಲಿಸಿದರು. ಇವರಲ್ಲಿ ಎರಡನೆಯವನು ಕ್ರಿ.ಶ. 800ರಲ್ಲಿ ಪಾಪಲ್ ಸ್ಟೇಟ್ಸ್ (ಪೋಪ್ ರಾಜ್ಯಗಳು) ಎಂದು ಕರೆಯಲ್ಪಡುವ ಅನೇಕ ರಾಜ್ಯಗಳನ್ನು ವಿಧಿಯುಕ್ತವಾಗಿ ಪೋಪರಿಗೆ ದೃಢಪಡಿಸಿದನು. ಈ ರಾಜ್ಯಗಳನ್ನು ಈಗಾಗಲೇ ಪೋಪನು ಕ್ರಿ.ಶ. 539ರಿಂದ ಹೊಂದಿರುವ ನಗರ ಮತ್ತು ರೋಮಿನ ಉಪನಗರಿಗಳಿಗೆ ಹೆಚ್ಚುವರಿಯಾಗಿ ಉಲ್ಲೇಖಿಸಲಾಗಿದೆ. ಹೀಗೆ, ಆಗ, ಲೊಂಬಾರ್ಡ್ ರಾಜ್ಯವು ಅಥವಾ ಕೊಂಬು ಅಡಚಣೆ ಮಾಡಲಿಲ್ಲ, ಅಥವಾ ಅದು ಕೆಲವೊಮ್ಮೆ ಆಕ್ರಮಿಸಿದರೂ ಕೆಲವರು ಊಹಿಸುವಂತೆ ಈಗ ಪೋಪನ ಕೊಂಬಿನ ಸ್ಥಾನವನ್ನು ಆಕ್ರಮಿಸಲಿಲ್ಲ.

ಲೊಂಬಾರ್ಡ್ಸ್‌ನ ಆಕ್ರಮಣದ ಬಗ್ಗೆ ಗಿಬ್ಬನ್ ಹೇಳುವುದೇನೆಂದರೆ: "ಪಶ್ಚಾತ್ತಾಪದ ಸ್ಮರಣೀಯ ಉದಾಹರಣೆ ಮತ್ತು ಧರ್ಮಶ್ರದ್ಧೆಯು ಲೊಂಬಾರ್ಡ್‌ನ ಅರಸನಾದ Lutiprardನಿಂದ ವ್ಯಕ್ತಪಡಿಸಲಾಯಿತು. ವ್ಯಾಟಿಕನ್ನಿನ ದ್ವಾರದಲ್ಲಿ ವಿಜಯಶಾಲಿಯು ಗ್ರಿಗರಿ I ನ ಸ್ವರವನ್ನು ಕೇಳಿಸಿಕೊಂಡನು, ಆತನ ಸೈನ್ಯವನ್ನು ಹಿಂತೆಗೆದುಕೊಂಡನು, ತನ್ನ ವಿಜಯವನ್ನು ತ್ಯಜಿಸಿದನು, ಸಂತ ಪೇತ್ರನ ದೇವಾಲಯವನ್ನು ಗೌರವದಿಂದ ಭೇಟಿಕೊಟ್ಟನು. ತನ್ನ ಆರಾಧನೆಗಳನ್ನು ಮುಗಿಸಿದ ನಂತರ ತನ್ನ ಖಡ್ಗ ಮತ್ತು ಕಠಾರಿಯನ್ನು, ಆತನ ಯುದ್ಧಕವಚ ಮತ್ತು ತೋಳಿಲ್ಲದ ಮೇಲಂಗಿಯನ್ನು, ಆತನ ಬೆಳ್ಳಿಯ ಕ್ರೂಜೆ ಮತ್ತು ಬಂಗಾರದ ಕಿರೀಟವನ್ನು ಅಪೋಸ್ತಲನ ಸಮಾಧಿಯ ಮೇಲೆ ಸಮರ್ಪಿಸಿದನು". ಆದರೆ ಆತನ ಉತ್ತರಾಧಿಕಾರಿ Astolphus ಎಂಬಾತನು ತನ್ನನ್ನು ಚಕ್ರವರ್ತಿಯ ಮತ್ತು ಪೋಪನ ಸಮಾನನಾದ ಶತ್ರುವೆಂದು ಪ್ರಕಟಿಸಿ... ವಿಜಯಶಾಲಿಯಾದ ಲೊಂಬಾರ್ಡ್‌ನ್ನು ಅದರ ನ್ಯಾಯಬದ್ಧ ಪರಮಾಧಿಕಾರ ವೆಂದು ಅಂಗೀಕಾರ ಮಾಡುವಂತೆ ಕರೆನೀಡಿದನು. ರೋಮನ್ನರು ಹಿಂಜರಿದರು; ಅವರು ವಿನಂತಿಸಿ ಕೊಂಡರು, ಅವರು ದೂರಿತ್ತರು; ಮತ್ತು ಹೆದರಿಸುವ ಸಂಸ್ಕಾರ ಶೂನ್ಯರನ್ನು ಶಸ್ತ್ರಗಳಿಂದ ತಡೆಗಟ್ಟಿದರು. ಪೋಪರವರೆಗಿನ ವಿಚಾರ ವಿನಿಮಯವು ಸ್ನೇಹಸಂಬಂಧವನ್ನು ನಿಶ್ಚಯಪಡಿಸಿತು ಮತ್ತು ಸೇಡು ತೀರಿಸಿಕೊಳ್ಳುವುದನ್ನು ಆಲ್ಪ್ಸ್ ಪರ್ವತದ ಆಚೆಗೆ ಹಾಕಲಾಯಿತು.

ಪೋಪ್ ಸ್ಟೀಫನ್ III ಎಂಬಾತನು ಫ್ರಾನ್ಸಿಗೆ ಭೇಟಿಕೊಟ್ಟನು ಮತ್ತು ಅಗತ್ಯವಾದ ಸಹಾಯಗಳನ್ನು ಪಡಕೊಳ್ಳುವಲ್ಲಿ ಯಶಸ್ವಿಯಾದನು. ಮತ್ತು ಗಿಬ್ಬನ್ ಹೇಳುವುದೆಂದರೆ, ಆತನು ಅಲ್ಲಿಂದ ಅರಸನಾದ ಪೆಪಿನ್‌ನ ನೇತೃತ್ವದ ಸೈನ್ಯದೊಡನೆ ಒಬ್ಬ ವಿಜಯಶಾಲಿಯಂತೆ ಹಿಂತಿರುಗಿದನು. ಲೊಂಬಾರ್ಡರು ತಮ್ಮ ಬಲಹೀನ ಪ್ರತಿರೋಧದೊಡನೆ ಲಜ್ಜಾಸ್ಪದವಾದ ಶಾಂತಿಯನ್ನು ಹೊಂದಿಕೊಂಡರು ಮತ್ತು ಸೊತ್ತುಗಳನ್ನು ಪುನಃ ವಶಪಡಿಸುವ ಮತ್ತು ರೋಮನ್ ಸಭೆಯ ಪವಿತ್ರತೆಯನ್ನು ಗೌರವಿಸುವ ಪ್ರಮಾಣ ಮಾಡಿದರು.

ಪೋಪರ ಹಕ್ಕೇಳಿಕೆಗಳ ನಿದರ್ಶನವಾಗಿ ಮತ್ತು ಅವರು ರಾಜ್ಯವನ್ನು ಹಿಡಿದಿರುವ ಹಕ್ಕೇಳಿಕೆ ಮತ್ತು ಶಕ್ತಿಯ ಬಗ್ಗೆಯಾಗಿ ಆ ಸಮಯದಲ್ಲಿ ಗಿಬ್ಬನು ಪೋಪ್ ಸ್ಟೀಫನ್ III ಬರೆದ, ಫ್ರೆಂಚಿನ ಅರಸನಿಗೆ ಕಳುಹಿಸಿದ ಪತ್ರದ ಬಗ್ಗೆ ನಾವು ಪುನಃ ಗಿಬ್ಬನ್ ಬರೆದಿರುವುದರಿಂದ

* ಈ ಹಕ್ಕೇಳಿಕೆಗಳು ಸುಳ್ಳಾಗಿವೆ ಮತ್ತು ಖೋಟಾ ದಾಖಲೆಗಳ ಮೇಲೆ ಆಧಾರಿತವಾಗಿವೆ. ಖೋಟಾ ಶಾಸನಕ್ಕೆ ಸಂಬಂಧಿಸಿದವುಗಳು. ಈಗ ರೋಮನ್ ಕ್ಯಾಥೋಲಿಕ್‌ರಿಂದಲೂ ನಿರ್ಬಂಧಗಳಿಲ್ಲದೆ ಅಂಗೀಕರಿಸಲ್ಪಟ್ಟಿವೆ. ಕಾನ್ಸಂಟೈನನು ಆ ತರಹದ ಯಾವುದೇ ಕೊಡುಗೆ ನೀಡಿರಲಿಲ್ಲ. ನಾವು ಇಲ್ಲಿ ವಿವರಿಸಿದಂತೆ ಪೋಪನ ಅಧಿಕಾರವು ತನ್ನ ಶಕ್ತಿಯಲ್ಲಿ ಮತ್ತು ರೋಮನ್ನು ನಿಯಂತ್ರಿಸುವುದರಲ್ಲಿ ಬೆಳೆದಿದೆ.

ಉಲ್ಲೇಖಿಸುತ್ತೇವೆ. ಫ್ರೆಂಚ್ ಸೈನ್ಯವನ್ನು ಹಿಂತೆಗೆದುಕೊಂಡ ಕೂಡಲೇ ಲೊಂಬಾರ್ಡ್ಸ್ ಪುನಃ ರೋಮಿನ ಮೇಲೆ ಹಲ್ಲೆಮಾಡಿದನು ಮತ್ತು ಪೋಪನ ಹೊಸ ಸಹಾಯವನ್ನು ಬಯಸಿದನು. ಆತನು ಅಪೋಸ್ತಲನಾದ ಪೇತ್ರನ ಹೆಸರಿನಲ್ಲಿ ಹೀಗೆ ಬರೆದನು:–

"ಅಪೋಸ್ತಲನು ತನ್ನ ದತ್ತು ಪುತ್ರರಿಗೆ, ಅರಸ, ಪಾದ್ರಿ, ಫ್ರಾನ್ಸಿನ ಗಣ್ಯರು ಇವರುಗಳಿಗೆ, ದೇಹದಲ್ಲಿ ಸತ್ತವನಾಗಿದ್ದರೂ ತಾನು ಆತ್ಮೀಕವಾಗಿ ಇನ್ನೂ ಜೀವಿಸುವವನು ಎಂಬ ಭರವಸೆಯನ್ನು ನೀಡುತ್ತಾನೆ. ಅವರು ರೋಮಿನ ಸಭೆಯ ಸ್ಥಾಪಕನೂ, ಪೋಷಕನೂ ಆದ ಆತನ ಮಾತುಗಳನ್ನು ಈಗ ಕೇಳಿಸಿಕೊಂಡು ಅವಕ್ಕೆ ವಿಧೇಯರಾಗಲೇ ಬೇಕು; ಕನ್ಯೆ, ದೇವದೂತರುಗಳು, ಸಂತರುಗಳು, ಹುತಾತ್ಮರು ಮತ್ತು ಪರಲೋಕದ ಎಲ್ಲಾ ಸಮೂಹಗಳೂ ಅವಿರೋಧವಾಗಿ ಕೋರಿಕೆಯನ್ನು ಒತ್ತಾಯಪಡಿಸುವುದು ಮತ್ತು ಹಂಗನ್ನು ಅರಿಕೆ ಮಾಡುವುದು ಏನೆಂದರೆ; ಶ್ರೀಮಂತಿಕೆಗಳು, ವಿಜಯ ಮತ್ತು ಪರದೈಸು ಅವರ ಭಕ್ತಿವಂತ ಸಾಹಸಕಾರ್ಯಗಳಿಗೆ ಕಿರೀಟಧಾರಣೆಮಾಡುತ್ತದೆ, ಮತ್ತು ಅವರು ಆತನ ಸಮಾಧಿ, ಆತನ ದೇವಾಲಯ ಮತ್ತು ಆತನ ಜನರು ವಿಶ್ವಾಸಘಾತಕನಾದ ಲೊಂಬಾರ್ಡ್ಸ್ ಅನ್ನು ಸಹಿಸಿ ಕೊಳ್ಳುವುದಾದರೆ ಆ ನಿತ್ಯ ನರಕದಂಡನೆಯು ಅವರ ಅಲಕ್ಷತೆಗೆ ದೊರೆಯುವ ಜುಲ್ಮಾನೆಯಾಗಿದೆ, ಮತ್ತು ಗಿಬ್ಬನನು ಸೇರಿಸುವುದೇನೆಂದರೆ "ಪೆಪಿನ್ನಿನ ಎರಡನೆಯ ದಂಡಯಾತ್ರೆಯು ಮೊದಲದಕ್ಕಿಂತ ಕಡಿಮೆ ವೇಗವುಳ್ಳದ್ದಲ್ಲ, ಮತ್ತು ಅದೃಷ್ಟಕಾರಕವಾದುದಲ್ಲ. ಸಂತ ಪೇತ್ರನು ತೃಪ್ತಿಗೊಂಡಿದ್ದಾನೆ; ರೋಮ್ ತಿರುಗಿ ಕಾಪಾಡಲ್ಪಟ್ಟಿದೆ"

ಪೋಪನ ಅಧಿಕಾರದ ರಾಜ್ಯದ ಈ ಪ್ರಾರಂಭವು ಪ್ರಸಿದ್ಧಿಪಡೆದಿಲ್ಲದಿದ್ದರೂ ಸ್ಪಷ್ಟವಾಗಿ ಅಂಗೀಕರಿಸುವುದು ಮುಖ್ಯವಾಗಿದೆ ಎಂಬುದರಲ್ಲಿ ನಮಗೆ ಮೇಲಿನಂತೆ ಜಾಗರೂಕ ಗುರುತಿಸುವಿಕೆಯು ತೋರಿಬರುತ್ತದೆ. ಕ್ರಿ.ಶ. 539 ಪ್ರವಾದನೀಯವಾಗಿ ಸೂಚಿಸಿದ ದಿನಾಂಕ ಎಂಬುದನ್ನು ತೀರ್ಮಾನಿಸುವಂತೆ ನಾವು ಸಮರ್ಥನೀಯ ದಾಖಲೆಗಳನ್ನು ರೋಮನ್ ಕ್ಯಥೋಲಿಕ್ ಬರಹಗಳಿಂದ ಕೆಳಕಂಡಂತೆ ಒದಗಿಸುತ್ತೇವೆ:–

ಪಶ್ಚಿಮಾತ್ಯ ರೋಮನ್ ಸಾಮ್ರಾಜ್ಯಗಳು ಪರಾಭವಗೊಂಡ ಮೇಲೆ ಪೋಪರ ರಾಜಕೀಯ ಪ್ರಭಾವವು ಇನ್ನೂ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ಪೋಪರುಗಳು ನತದೃಷ್ಟ ಇಟಲಿಯನ್ನು ತಮ್ಮ ರಕ್ಷಣೆಗೆ ತೆಗೆದುಕೊಳ್ಳಬೇಕಾದ ಸತ್ಯದ ಕಾರಣ ಏನೆಂದರೆ ನಿರ್ದಿಷ್ಟವಾಗಿ ರೋಮ್ ಮತ್ತು ಅದರ ಸುತ್ತಮುತ್ತಲ ದೇಶಗಳು ಆಗಿಂದ್ದಾಗ್ಯೆ ತಮ್ಮ ಪ್ರಭುಗಳನ್ನು ಬದಲಾಯಿಸುವವರಾಗಿದ್ದು ನಿರಂತರವಾಗಿ ಒರಟು ಮತ್ತು ಕ್ರೂರಿ ಜನರ ಆಕ್ರಮಣಗಳಿಗೆ ಈಡಾಗುತ್ತಿದ್ದರು. ಸಂತ ಪೇತ್ರನ ಉತ್ತರಾಧಿಕಾರಗಳು ಉತ್ಸಾಹಶಾಲಿಗಳಾಗಿ ತಮ್ಮ ಆಸಕ್ತಿಯನ್ನು ಇಟಲಿಯ ನಿವಾಸಿಗಳಲ್ಲಿ ತೋರಿಸುತ್ತಿದ್ದದರಿಂದ ಎರಡನೆಯವರು (ಅಂದರೆ ರೋಮ್ ಮತ್ತು ಅದರ ಸುತ್ತಮುತ್ತಲ ದೇಶಗಳು) ಈಗಲೂ ಆ ದೇಶವನ್ನು ಆಳುವೆವೆಂದು ಹೇಳಿಕೊಳ್ಳುತ್ತಿದ್ದ ಪೌರ್ವಾತ್ಯ ರೋಮನ್ ಚಕ್ರವರ್ತಿಗಳಿಂದ ಸಂಪೂರ್ಣವಾಗಿ ನಿರ್ಲಕ್ಷಕ್ಕೊಳಗಾಗುತ್ತಿದ್ದರು. ಒಂದನೇ ಜಸ್ಟೇನಿಯನ್ನನು ಇಟಲಿಯ ಒಂದು ಭಾಗವನ್ನು ಕ್ರಿ.ಶ. 539ರಲ್ಲಿ ಪುನಃ ಗೆದ್ದುಕೊಂಡು ಅದನ್ನು ಗ್ರೇಸಿಯನ್ ಪ್ರಾಂತ್ಯವನ್ನಾಗಿ ಪರಿವರ್ತಿಸಿದ್ದರೂ, ಅದರ ಬಹಳಷ್ಟು ನಿವಾಸಿಗಳು ಉತ್ತಮವಾಗಿರಲಿಲ್ಲ. ಬೈಜಂಟೈನ್ ಚಕ್ರವರ್ತಿಗಳು ರಾವೆನ್ನಾದ Exarchate ಪ್ರಜೆಗಳಿಂದ ಕರಗಳನ್ನು ವಸೂಲು ಮಾಡುತ್ತಿದ್ದರೂ ಅವರು ಅದಕ್ಕೆ ಯಾವುದೇ ರೀತಿ ಅವಶ್ಯವಾದ ರಕ್ಷಣೆಯನ್ನು ನೀಡುತ್ತಿರಲಿಲ್ಲ"

"ಈ ಪರಿಸ್ಥಿತಿಗಳಲ್ಲಿ ಆದದ್ದೇನೆಂದರೆ.... ಚಕ್ರವರ್ತಿಗಳು... ತಮ್ಮ ಎಲ್ಲಾ ನಿಜವಾದ ಅಧಿಕಾರವನ್ನು ಕಳಕೊಂಡರೂ ಸರ್ಕಾರದಲ್ಲಿ ಹೆಸರು ಮಾತ್ರದ ಪ್ರಭುಗಳಾಗಿ ಉಳುಕೊಂಡಿದ್ದರು. ಅದೇ ಸಮಯದಲ್ಲಿ, ಪೋಪರುಗಳು ಆ ಕ್ಷಣದ ಅಗತ್ಯತೆಗಳಿಗೆ ಅನುಗುಣವಾಗಿ ರೋಮನ್ ರಾಜ್ಯಗಳ ಮೇಲೆ ತಮ್ಮ ಪ್ರಾಬಲ್ಯವನ್ನು ಹೊಂದಿಕೊಳ್ಳಲು ಕಾರ್ಯರೂಪದಲ್ಲಿ ಮುಂದೆ ಬಂದಿತು... ಈ ಸ್ವಯಂ ಪ್ರೇರಣೆಯಿಂದುಂಟಾದ ಉದಾರತೆಯ ಶ್ರಮದ ಫಲವು ನಂತರದ ಸಮಯದಲ್ಲಿ ನ್ಯಾಯಯುತವಾದ ಆರ್ಜನೆ ಎಂಬುದಾಗಿ ಅಂಗೀಕಾರವಾಯಿತು. (Pepin ಮತ್ತು Charlemagne ಯವರಿಂದ).... ಸಮಾಕಾಲೀನ ಬರಹಗಾರರು ಹೇಳುವಂತೆ ಪೆಪಿನ್ "ಗೆದ್ದುಕೊಂಡ ರಾಜ್ಯದ ಭಾಗವನ್ನು ಅಪೋಸ್ತೋಲಿಕ ಬಿಷೋಪರ ಅಧಿಕಾರ ಕ್ಷೇತ್ರಕ್ಕೆ ಪುನಃವಶಪಡಿಸಿದನು. ಪೆಪಿನ್ನಿನ ಈ ದಾನ ಅಥವಾ ಪುನಃವಶವು ಆತನ ಮಗನಾದ Charlemagneಯಿಂದ ದೃಢೀಕರಿಸಲ್ಪಟ್ಟಿತು ಮತ್ತು ವಿಸ್ತರಿಸಲ್ಪಟ್ಟಿತು. ಆತನು ಕ್ರಿ.ಶ. 774ರಲ್ಲಿ ಇಟಲಿಯಲ್ಲಿ ಲೊಂಬಾರ್ಡನ ಆಡಳಿತವನ್ನು ಕೊನೆಗಾಣಿಸಿದನು. ಈ ಕ್ರಮಬದ್ಧವಾದ ರೀತಿಯಲ್ಲಿ ಲೌಕಿಕ ಶಕ್ತಿ ಮತ್ತು ಪೋಪರ

ಸಾರ್ವಭೌಮತ್ವವು ದೈವಿಕ ಅನುಗ್ರಹದಿಂದ ಕ್ರಮೇಣವಾಗಿ ಸ್ಥಾಪಿತವಾಯಿತು"

ಮೇಲಿನ ಹೇಳಿಕೆಗಳು H. Brueck D.D. ರವರ The History of Catholic Church; Vol I., 250,251 ರಿಂದ ಆರಿಸಿಕೊಂಡದ್ದು. ಅದು ರೋಮನ್ ಕೈಥೋಲಿಕರು ಸಾಮಾನ್ಯವಾಗಿ ತಮ್ಮ ಕಾಲೇಜುಗಳಲ್ಲಿ ಮತ್ತು ಸೆಮಿನರಿಗಳಲ್ಲಿ ಮಾಡಿದ ನಿರ್ದಿಷ್ಟ ಪ್ರಮಾಣದ ಕಾರ್ಯವಾಗಿದ್ದು ಪೋಪನಿಗೆ ಸಂಬಂಧಿಸಿದ ಗಣ್ಯರ ಒಪ್ಪಿಗೆ ಪಡೆದಿತ್ತು. ಅದರ ಸಾಕ್ಷ್ಯಗಳು ಮೌಲ್ಯವುಳ್ಳವುಗಳು, ಪೋಪನ ಅಧಿಕಾರದ ಐಹಿಕ ಅಧಿಕಾರದ ಕ್ರಮೇಣವಾದ ಹೆಚ್ಚುವಿಕೆಗೆ ಮುಟ್ಟುವಂತಾದ್ದು ಮತ್ತು ಅದರ ಪ್ರಾರಂಭವು ಪರಿಸ್ಥಿತಿಗೆ ಅನುಕೂಲಕರವಾದ ಕಾಲವಾಗಿದೆ. ಕ್ರಿ.ಶ. 539 ರಲ್ಲಿ Ostrogothic Kingdomನ ಪತನವು ಪ್ರವಾದನೀಯ ಅಳತೆಯಿಂದ (1260 ವರ್ಷಗಳು) ಸ್ಪಷ್ಟವಾಗಿ ಸೂಚಿತವಾಗುತ್ತದೆ. ದೇಶವು ನಿರ್ಜನಗೊಳ್ಳುತ್ತಿರುವ ಈ ಸರಿಯಾದ ಸಮಯದ ಬಿಂದುವು ದೇವರ ದೃಷ್ಟಿಯಲ್ಲಿ ಜಿಗುಪ್ಸೆ ಹುಟ್ಟಿಸುವ ವ್ಯವಸ್ಥೆಯಾಗಿ ಸಿದ್ಧವಾಗಿದೆ.

ಅದೇ ಆಲೋಚನೆಯ ಸಾಲುಗಳೊಂದಿಗೆ ಸಾಮರಸ್ಯದಿಂದ ಮತ್ತು ಪೋಪನ ಅಧಿಕಾರವು ಚಾರ್ಲೆಮ್ಯಾಗ್ನೆಯ (Charlemagne) ದಿನಕ್ಕಿಂತ ಮೊದಲೇ ಸ್ಥಾಪಿತವಾಯಿತು ಎಂಬುವುದನ್ನು ಸ್ಪಷ್ಟವಾಗಿ ಸಿದ್ಧಪಡಿಸುವ ಸಾಹಸದಲ್ಲಿ ಮತ್ತೊಂದು ಕೈಥೋಲಿಕ್ ಕಾರ್ಯವಾದ "The Chair of St. Peter" ಎಂಬ ಪುಸ್ತಕದಲ್ಲಿನ ಐಹಿಕ ಶಕ್ತಿಯ ಬೆಳವಣಿಗೆಗೆ ಸಂಬಂಧಪಟ್ಟ ಒಂದು ಅಧ್ಯಾಯದಲ್ಲಿ (ಪುಟ 173) ಹೀಗೆ ಹೇಳಪಟ್ಟಿದೆ – ರೋಮ್ ಹೆಸರಿಗೆ ಮಾತ್ರವಾಗಿ ಚಕ್ರವರ್ತಿಯಿಂದ ನೇಮಕನಾದ ಪೆಟ್ರಿಸಿಯನ್ (Patrician)ನಿಂದ ಆಳಲ್ಪಡುತ್ತಿತ್ತು, ಆದರೆ ವಾಸ್ತವವಾಗಿ ಸಂದರ್ಭಗಳ ಒತ್ತಡದ ಮೂಲಕ ಪೋಪರುಗಳೇ ಆ ನಗರದ ಪ್ರಧಾನ ಒಡೆಯರುಗಳಾಗಿದ್ದರು". ಈ ಅಧಿಕಾರದ ಮತ್ತು ಆಳ್ವಿಕೆಯ ಪುರಾವೆಯಾಗಿ ಬರಹಗಾರನು ಪೋಪನ ಅಧಿಕಾರದ ಬಗ್ಗೆ, ಮತ್ತು ಹೆಸರಿಗೆ ಮಾತ್ರ ಆಡಳಿತಗಾರರೆನಿಸಿಕೊಂಡವರ ಅಧಿಕಾರವಿಲ್ಲ ದಿರುವಿಕೆಯ ಬಗ್ಗೆ ಚಾರಿತ್ರಿಕ ಪುರಾವೆಗಳನ್ನು ತಿಳಿಸಲು ಮುಂದಾಗುತ್ತಾನೆ. ಕ್ರಿ.ಶ. 590ರಲ್ಲಿ (ಪೋಪನ ಅಧಿಕಾರವು ನೆಲೆಗೊಂಡ ಕೇವಲ 50 ವರ್ಷಗಳ ನಂತರ) ಪೋಪನ ಅಧಿಕಾರ ಆಗಲೇ ಇತ್ತೆಂಬುದಕ್ಕೆ ನಿದರ್ಶನವಾಗಿ ಆತನು ಪೋಪ್ ಗ್ರಿಗರಿ ದ ಗ್ರೇಟ್ ಎಂಬಾತನನ್ನು ಉದಾಹರಿಸಿ ಹೀಗೆ ಹೇಳುತ್ತಾನೆ :–

"ನಾವು (Leontius) ಎಂಬಾತನನ್ನು Etruriaದ Nepiಯ ದೇಶಾಧಿಪತಿಯಾಗಿ ರವಾನಿಸುವುದನ್ನು ಕಂಡಿದ್ದೇವೆ. ಆತನು ತಾನೇ ಹೇಳುವಂತೆ ಅದರ ನಿವಾಸಿಗಳು ಆತನಂತೆಯೇ ವಿಧೇಯರಾಗಬೇಕು. ಪುನಃ ಆತನು Constantius ಎಂಬಾತನನ್ನು ನೇಪಲ್ಸಿನ ಮುಖ್ಯ ಸ್ಥಾನದಲ್ಲಿ ದೇಶಾಧಿಪತಿಯನ್ನಾಗಿ ನೇಮಿಸುತ್ತಾನೆ. ನಂತರದಲ್ಲಿ ಆತನು ಬಿಷೋಪರುಗಳಿಗೆ ಅವರ ನಗರಗಳ ರಕ್ಷಣೆ ಮತ್ತು ಒದಗಿಸುವಿಕೆಗಳ ಬಗ್ಗೆ ಬರೆಯುತ್ತಾನೆ; ಸೈನಾಧಿಕಾರಿಗಳಿಗೆ ಅಪ್ಪಣೆಯನ್ನು ಜಾರಿಗೊಳಿಸುತ್ತಾನೆ... ಒಂದು ಮಾತಿನಲ್ಲಿ, ಆತನು ಇಟಲಿಯ ಅದರ ನಿಜವಾದ ಆಳ್ವಿಕೆ ಮಾಡುವವನೂ, ಸಂರಕ್ಷಕನೂ ಆಗುತ್ತಾನೆ. ಹೀಗಾಗಿ ಆತನು "ಯಾರು ಒಬ್ಬ ಪಾಸ್ಟರ್ ಆಗಿ ನನ್ನ ಸ್ಥಾನವನ್ನು ತುಂಬುತ್ತಾರೋ ಅಂಥವರು ಗಂಭೀರವಾಗಿ ಬಾಹ್ಯ ಜವಾಬ್ದಾರಿಗಳಲ್ಲಿ ತೊಡಗಿರುತ್ತಾರೆ, ಹಾಗಾಗಿ ಆತನು ತನ್ನ ಪಾಸ್ಟರ್ ಕಾರ್ಯಗಳಲ್ಲಿ ಅಥವಾ ಐಹಿಕ ಅರಸನ ಕಾರ್ಯಗಳನ್ನು ನೆರವೇರಿಸುವನೋ ಎಂಬುದು ಅನಿಶ್ಚಿತವಾಗುತ್ತದೆ" ಎಂದು ಸಮರ್ಥಿಸುತ್ತಾನೆ.

ಐಹಿಕ ಶಕ್ತಿಯ ಬೆಳವಣಿಗೆಯು ಕ್ರಿ.ಶ. 539 ರಿಂದ ಪ್ರಾರಂಭಗೊಂಡು ಕೇವಲ ಐವತ್ತು ವರ್ಷಗಳ ಸಣ್ಣ ಅವಧಿಯಲ್ಲಿ ಇಷ್ಟೊಂದು ಹೆಚ್ಚಿನದಾಗಿದ್ದು ದೊಡ್ಡ ವಿಷಯವೇ ಸರಿ. ಅದುದರಿಂದ ನಾವು 1260 ವರ್ಷಗಳಲ್ಲಿ ಅಂದರೆ ಅದರ ಸುಮಾರು 3½ ಕಾಲದಷ್ಟು ಸಮಯದಲ್ಲಿ ಪೋಪರ ರಾಜ್ಯವು ಎರಡೂ ತುದಿಗಳಲ್ಲಿ ಚೆನ್ನಾಗಿ ಮತ್ತು ಸ್ಪಷ್ಟವಾಗಿ ಗುರುತಿಸಲ್ಪಡುವುದೆಂಬ ಭರವಸವಿಡಬಹುದು.

ದಾನಿಯೇಲನು ಅಸಹ್ಯತೆಯ ಶಕ್ತಿಯಿಂದ ಸಭೆಯನ್ನು ನಿರ್ಜನಗೊಳಿಸುವಂತೆ ಮತ್ತು ಸತ್ಯವನ್ನು ಹತ್ತಿಕ್ಕುವಂತೆ ಮಿತಿಯನ್ನಿಟ್ಟಿದ್ದಾರೆಂಬುದನು ಕೇಳಿ, ದೇವಜನರ ಈ ಶಕ್ತಿ ಮತ್ತು ಭಕ್ತರನ್ನು ಅಧಿಕಾರಕ್ಕೆ ಎತ್ತರಿಸುವುದು ಮಿಕಾಯೇಲನ (ಕ್ರಿಸ್ತನ) ರಾಜ್ಯದಲ್ಲಿ ಇನ್ನೂ ಪ್ರವೇಶಿಸಿಲ್ಲ. ಆದರೆ ಅದು ಅವರಿಗೆ ತಮ್ಮ ಆಕ್ರಮಣಗಾರರಿಂದ ಬಿಡುಗಡೆಯನ್ನು ಒದಗಿಸುವುದು ಎಂದು ತಿಳಿದುಕೊಂಡನು. ಆದುದರಿಂದ ಇದು ಇನ್ನೂ ಆತನು ಬಯಸಿದ ತಿಳುವಳಿಕೆಯಾಗಿರಲಿಲ್ಲ: "ನನಗೆ ಕೇಳಿಸಿದರೂ ಅರ್ಥವಾಗಲಿಲ್ಲ; ಆಗ ನಾನು ಈ ಕಾರ್ಯಗಳ ಪರಿಣಾಮವೇನು ಎಂದು ಪ್ರಶ್ನೆಮಾಡಲು ಅವನು – ದಾನಿಯೇಲನೇ, ಈ ಮಾತುಗಳು ಅಂತ್ಯಕಾಲದವರೆಗೆ ಮುಚ್ಚಲ್ಪಟ್ಟು ಮುದ್ರಿತವಾಗಿದೆ, ಹೋಗು" (ನೀನು ಈ ವಿಷಯವನ್ನು ಗ್ರಹಿಸಲು ಪ್ರಯತ್ನಿಸುವುದು ಪ್ರಯೋಜನವಿಲ್ಲದ್ದು) ಎಂದು

ಹೇಳಿದನು (ದಾನಿ. 12:8). ನಿರಂತರವಾದ ಸಮರ್ಪಣೆಯು ತೆಗೆದು ಹಾಕಿದ ಸಮಯದ ನಂತರದಲ್ಲಿ ನಿರ್ಜನತೆಯ ಅಸಹ್ಯಕರ ವಸ್ತುವು ಪ್ರತಿಷ್ಠಿತವಾಗುವವರೆಗೆ (ಕ್ರಿ.ಶ. 539) ಒಂದು ಸಾವಿರದ ಇನ್ನೂರತೊಂಬತ್ತು ವರ್ಷಗಳಾಗುತ್ತವೆ. ಆಗ ಅನೇಕರು ಶುದ್ಧಗೊಳ್ಳುವರು (ತಮ್ಮನ್ನು ಪ್ರತ್ಯೇಕಿಸಿಕೊಳ್ಳುವರು). ಹೌದು, ತಮ್ಮನ್ನು ಶುದ್ಧೀಕರಿಸಿ ಶುಭ್ರಮಾಡಿಕೊಂಡು ಶೋಧಿತರಾಗುವರು. ಹೌದು ಬೆಂಕಿಯಿಂದಲೋ ಎಂಬಂತೆ ಶೋಧಿಸ ಲ್ಪಡುವರು; ಆದರೆ ದುಷ್ಟರು ದುಷ್ಟರಾಗಿಯೇ ನಡೆಯುವರು, ಅವರಲ್ಲಿ ಯಾರಿಗೂ ವಿವೇಕವಿರದು; ಜ್ಞಾನಿಗಳಿಗೆ ವಿವೇಕವಿರುವುದು. ಹೋ! ಒಂದು ಸಾವಿರದ ಮೂನ್ನೂರ ಮೂವತ್ತೈದು ದಿನಗಳ ಕೊನೆಯ ಮಟ್ಟಿಗೆ ನಿಷ್ಠಾವಂತಿಕೆಯಿಂದ ತಾಳಿರುವವನು ಧನ್ಯನು! ಮತ್ತು ನೀನು ಹೋಗಿ (ನಿನ್ನ ಮಾರ್ಗದಲ್ಲಿ) ಅಂತ್ಯದವರೆಗೆ ಇರು. ನೀನು ದೀರ್ಘ ನಿದ್ರೆಯನ್ನು ಹೊಂದಿ ಯುಗ ಸಮಾಪ್ತಿಯಲ್ಲಿ ಎದ್ದು ನಿನಗಾಗುವ ಸ್ವಾಸ್ಥದೊಳಗೆ ನಿಲ್ಲುವಿ" ಎಂದು ಹೇಳಿದನು (ವಚನ 12,13).*

ಈ 1290 ಮತ್ತು 1335 ಪ್ರವಾದಿಯ ದಿನಗಳು ಅಕ್ಷರಶಃ ಪಾಪೆಲ್ ಅಧಿಕಾರವನ್ನು ನಾಶಗೊಳಿಸುವ ಅಂದರೆ, ಹಾಳು ಮಾಡುವ ಅಸಹ್ಯವನ್ನು "ಸ್ಥಾಪಿಸಿದ" ಸಮಯದಿಂದಲೂ ಪ್ರಾರಂಭಿಕ ಹಂತವನ್ನು ಹೊಂದಿವೆ ಎಂದು ಜಾಗರೂಕ ವಿದ್ಯಾರ್ಥಿ ಗಮನಿಸುತ್ತಾನೆ. ಕ್ರಿ.ಶ. 539ರ ವಿಭಿನ್ನ ಸಮಯದಲ್ಲಿ ಸಂಭವಿಸುವ ಎರಡು ಘಟನೆಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಲಾಗಿದೆ. "ನಿತ್ಯವಾದ" (ಹೆಚ್ಚು ಸರಿಯಾಗಿ ಹೇಳಬೇಕೆಂದರೆ, ನಿರಂತರ ಬಲಿ) ಹೋಮವನ್ನು ನೀಗಿಸಿ ಹಾಳುಮಾಡುವ ಅಸಹ್ಯ ವಸ್ತುವನ್ನೇ ಸ್ಥಾಪಿಸುವುದು. ಆ ಎರಡೂ ಕಾಲವು ನಿಜ ಎಂಬುದನ್ನು ನಾವು ಯಾವಾಗಲೂ ಲೆಕ್ಕ ಹಾಕಬೇಕು. ಕ್ರಿ.ಶ. 539ರಲ್ಲಿ ನಿತ್ಯಹೋಮವನ್ನು ತೆಗೆದುಬಿಟ್ಟಿದ್ದನ್ನು ನಾವು ಮುಂದಿನ ಅಧ್ಯಾಯದಲ್ಲಿ ತೋರಿಸುತ್ತೇವೆ. ಮತ್ತು ಇದು "ಅಸಹ್ಯ" ಎಂದು ಹೆಸರಿಸಲು ಕಾರಣವಾದ ಪ್ರಮುಖ ವಸ್ತುವಾಗಿದೆ. ಆದ್ದರಿಂದ ಈ ಎರಡೂ ಘಟನೆಗಳಲ್ಲಿ ಕೊನೆಯದರಿಂದ ಅಸಹ್ಯ "ಸ್ಥಾಪನೆ"ಯನ್ನು ಎಣಿಕೆ ಮಾಡಬೇಕು".

ಮುಂದೆ, ಈ ಎರಡೂ ಕ್ರಮಗಳು ದಾನಿಯೇಲನ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ನೀಡಲಾಗಿದೆ ಎಂಬುದನ್ನು ಗಮನಿಸಿರಿ. ಅದರಲ್ಲಿ ಪೋಪನ ಅಧಿಕಾರವನ್ನು ಹತ್ತಿಕ್ಕುವ 1799ರ ನಂತರದಲ್ಲಿ, ಮೆಸ್ಸೀಯನಾದ ಮಿಕಾಯೇಲನ ರಾಜ್ಯವು ಸಿದ್ಧವಾಗುವ ಮೊದಲು ದೇವಜನರ ಬಲ ಬಿಡುಗಡೆ ಹೊಂದಿದ ನಂತರ ಏನಾಗುತ್ತದೆ ಎಂಬುದನ್ನು ಗಮನಿಸಿರಿ. ಉತ್ತರವು ಸಾರಾಂಶವಾಗಿ, ದಾನಿಯೇಲನು ಇನ್ನೂ ಹೆಚ್ಚಾಗಿ ಅರ್ಥಮಾಡಿಕೊಳ್ಳಲು ನಿರೀಕ್ಷಿಸಬಾರದು. ಅಂತ್ಯಕಾಲ ಪ್ರಾರಂಭವಾದ ಮೇಲೆ ಮೂವತ್ತು ವರ್ಷಗಳಲ್ಲಿ (1260+30=1290), ಪವಿತ್ರಗೊಳಿಸುವ ಶುದ್ಧೀಕರಣವು, ಪರಿಷ್ಕರಣ ಕಾರ್ಯವು ಪವಿತ್ರ ಜನರ ಮಧ್ಯದಲ್ಲಿ ಪ್ರಾರಂಭಗೊಳ್ಳುವುದು. ಇದರ ಸಂಬಂಧವಾಗಿ ಪ್ರವಾದನೆಯನ್ನು ಅರ್ಥಮಾಡಿಕೊಳ್ಳುವುದನ್ನು ಈ ಪರೀಕ್ಷೆಗೊಳಗಾದವರಲ್ಲಿನ ಬುದ್ಧಿವಂತರಾದವರಿಗೆ, ಶುದ್ಧ ಹಾಗೂ ಪ್ರತ್ಯೇಕ ವರ್ಗದವರಿಗೆ ಮಾತ್ರವೇ ದಯಪಾಲಿಸಲಾಗುವುದು; ಆದಾಗ್ಯೂ ಜ್ಞಾನವು ದೇವಭಕ್ತರಲ್ಲದವರಿಗೂ, ಅಪರಿಶುದ್ಧರಾದವರಿಗೂ ಸ್ವೀಕರಿಸಲಾರದ ಅಥವಾ ನಂಬದ ರೀತಿಯಲ್ಲಿ ಅರುಹಲ್ಪಡುವುದು. ಮುಂದೆ, ದರ್ಶನವನ್ನು ಸರಿಯಾಗಿ ತಿಳುಕೊಳ್ಳುವುದು ಸಂಪೂರ್ಣತೆಗಿಂತ ದೂರವಾಗಿದೆ ಎಂದು ತೋರಿಸಲಾಗಿದೆ; ವಾಸ್ತವವಾಗಿ 45 ವರ್ಷಗಳ ತನಕ ಅಥವಾ ಅಂತ್ಯಕಾಲವು ಪ್ರಾರಂಭವಾಗಿ 75 ವರ್ಷಗಳ ನಂತರ 1799ರಲ್ಲಿ (1260+75=1355) ಅದರಲ್ಲಿ ಕೆಲವೊಂದು ಮುಖ್ಯ ಮೂಲವಸ್ತುಗಳ ಕೊರತೆ ಇದೆ. ಇದನ್ನು ಹಿಬ್ರೂ ಮೂಲಗ್ರಂಥವು ಸ್ಪಷ್ಟವಾಗಿ ಸೂಚಿಸುತ್ತದೆ. ಅದು ವಿಷಯವನ್ನು ಗಮನಿಸುವವರು, ಈಗಾಗಲೇ ಏನನ್ನೋ ನೋಡಿರುವವರು ಮತ್ತು ಶಾಂತರೀತಿಯಿಂದ ಕಾಯುತ್ತಿರುವವರು ಇದ್ದಕ್ಕಿದ್ದಂತೆ (1335 ದಿನಗಳು ದಾಟುವಾಗ) ತಮ್ಮ ಊಹೆಗೆ ಮೀರಿದ ಒಂದು ಸ್ಪಷ್ಟವಾದ ನೋಟವನ್ನು ಪಡೆಯುವರೋ ಎಂಬಂತೆ ತೋರಿಬರುತ್ತದೆ – ಹೋ! ಆತನಿಂದ ಆಶೀರ್ವಾದ ಹೊಂದಿದವರು !

ಕ್ರಿ.ಶ. 539ರಿಂದ ಲೆಕ್ಕಮಾಡಿ, 1290 ಸಾಂಕೇತಿಕ ದಿನಗಳು 1829ಕ್ಕೆ ಕೊನೆಗೊಂಡವು ಮತ್ತು 1335 ದಿನಗಳು 1874ರ ಅಂತ್ಯದಲ್ಲಿ ಕೊನೆಗೊಂಡಿತು. ಈ ದಿನಾಂಕಗಳು ಎಷ್ಟು ಕರಾರುವಕ್ಕಾಗಿ ದರ್ಶನವನ್ನು ಅರ್ಥಮಾಡಿಕೊಳ್ಳುವುದನ್ನು ಅಂತ್ಯಕಾಲಕ್ಕೆ ಸಂಬಂಧಿಸಿದ ಪ್ರವಾದನೆಗಳೂ ಮತ್ತು ಬೇರ್ಪಡಿಸುವುದು, ಶುದ್ಧೀಕರಿಸುವುದು, ಬೆಂಕಿಯಿಂದಲೋ ಎಂಬಂತೆ ಸಂಸ್ಕರಿಸುವುದು ಮತ್ತು ದೇವರ ಮಕ್ಕಳನ್ನು ಮಗುವಿನಂಥಃ ನಮ್ರ ಹಾಗು ನಂಬಿಕಾರ್ಹ ಮನಸ್ಸು ಮತ್ತು ಹೃದಯವುಳ್ಳವರಾಗಲು ತರುವುದು. ಅವರು ದೇವರ ಕಾರ್ಯವನ್ನು ದೇವರ ರೀತಿಯಲ್ಲಿ ಮತ್ತು ಆತನ

* ಈ ಬಗ್ಗೆ ಈ ಭಾಷಾಂತರದ ಬಗ್ಗೆ ಮುನ್ನುಡಿಯಲ್ಲಿರುವ ಅಭಿಪ್ರಾಯವನ್ನು ಗಮನಿಸಿರಿ.

ಸಮಯದಲ್ಲಿ ಅಂಗೀಕರಿಸಿ ಅದನ್ನು ಸ್ವೀಕರಿಸುವಂತೆ ಸಿದ್ಧರಾಗುವಂತೆ ಮಾಡುತ್ತದೆ ಎಂಬುದನ್ನು ಓದುಗರು ಜಾಗರೂಕತೆಯಿಂದ ನಿರ್ಣಯಿಸಲಿ.

1844 ರಲ್ಲಿ ಒಂದು ಧಾರ್ಮಿಕ ಚಳುವಳಿಯೊಂದು ಪರಾಕಾಷ್ಠತೆಯನ್ನೇರಿತು. ಆಗ ಅದರಲ್ಲಿ ಭಾಗವಹಿಸಿದವರನ್ನು "Second adventists" ಮತ್ತು "Millerites"ಗಳೆಂದು ಕರೆಯುತ್ತಾರೆ. ಯಾಕೆಂದರೆ, ಅವರು ಕರ್ತನ ಎರಡನೆಯ ಆಗಮನವು ಆಗಿನ ಕಾಲದಲ್ಲೆಯೇ ನೆರವೇರುವುದೆಂದು ನಿರೀಕ್ಷಿಸಿ ಕೊಂಡಿದ್ದರು ಮತ್ತು ಅದರ ನಾಯಕನು ಮತ್ತು ಮುಖ್ಯ ಚಳುವಳಿಗಾರನು ಮಿಸ್ಟರ್ ವಿಲಿಯಂ ಮಿಲ್ಲರ್ ಎಂಬಾತನು. 1829ರಲ್ಲಿ ಪ್ರಾರಂಭವಾದ ಈ ಆಂದೋಲನವು 1844ರಲ್ಲಿ ಕರ್ತನ ಆಗಮನವಾಗುವುದೆಂಬ ನಿರೀಕ್ಷೆಯಿಂದ ಎಲ್ಲಾ ವರ್ಗದ ಕ್ರೈಸ್ತರ, ವಿಶೇಷವಾಗಿ ಪೂರ್ವ ಹಾಗೂ ಮಧ್ಯ ದೇಶಗಳ ಜನರ ಗಮನವನ್ನು ಸೆಳೆದಿದ್ದರು ಮತ್ತು ಅದು ಅಲ್ಲಿ ಬಹಳ ಭಾವೋದ್ವಿಗ್ನತೆಯನ್ನುಂಟು ಮಾಡಿತ್ತು. ಇದಕ್ಕಿಂದ ಬಹಳ ಹಿಂದೆ ಪ್ರೊ॥ ಬೆಂಗೆಲ್ ಎಂಬಾತನು ಜರ್ಮನಿಯ Tubingen ಎಂಬಲ್ಲಿ ಮೆಸ್ಸಿಯನ ಆಗಮನದ ಬಗ್ಗೆ ಇರುವ ಪ್ರವಾದನೆಗಳ ಕಡೆಗೆ ಗಮನ ಸೆಳೆಯುವುದನ್ನು ಪ್ರಾರಂಭಿಸಿದನು. ಪ್ರಖ್ಯಾತ ಧರ್ಮಬೋಧಕನಾದ Wolff ಎಂಬಾತನು ಏಷ್ಯಾದಲ್ಲಿ ಇದೇ ರೀತಿ ಮಾಡಿದನು. ಆದಾಗ್ಯೂ ಈ ಕಾರ್ಯದ ಕೇಂದ್ರವು ಅಮೇರಿಕವಾಗಿತ್ತು. ಅಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಯು ಎಲ್ಲಾ ಕಡೆಗಳಿಗಿಂತಲೂ ಹೆಚ್ಚು ಅನುಕೂಲಕರವಾಗಿತ್ತು. ಸತ್ಯವೇದಾಧ್ಯಯನಕ್ಕೆ ಮತ್ತಿತರ ಸಂಗತಿಗಳಿಗೆ ಸ್ವಾತಂತ್ರ್ಯವಿತ್ತು. ಮೊದಲನೆಯ ಆಗಮನ ಚಳುವಳಿಯು ಯೂದಾಯದ ಮಿತಿಯಲ್ಲಿದ್ದಂತೆ, ಎಲ್ಲಾ ಧರ್ಮನಿಷ್ಠ ಇಸ್ರಾಯೇಲ್ಯರು ಎಲ್ಲೆಡೆಯಲ್ಲಿಯೂ ಇದರ ಬಗ್ಗೆ ಹೆಚ್ಚು ಕಡಿಮೆ ಕೇಳಿಸಿಕೊಂಡಿದ್ದರು (ಅ.ಕೃ. 2:5).

ಸಹೋದರ ಮಿಲ್ಲರನ ನಿರೀಕ್ಷಣೆಗಳು ವಿಫಲವಾದ ಬಗ್ಗೆ ಎಲ್ಲರಿಗೂ ಸ್ವಲ್ಪಮಟ್ಟಿಗೆ ತಿಳಿದುಬಂತು. ಕರ್ತನು 1844ರಲ್ಲಿ ಬರಲಿಲ್ಲ, ಆತನು ನಿರೀಕ್ಷಿಸಿದಂತೆ, ಮತ್ತು ಇತರರು ಹಾಗೆ ನಿರೀಕ್ಷಿಸಲು ಕಲಿಸಿದಂತೆ ಈ ಲೋಕವು ಬೆಂಕಿಯಿಂದ ಸುಟ್ಟುಹೋಗಲಿಲ್ಲ; ಇದೊಂದು ಕ್ರಿಸ್ತನ (ಮಿಕಾಯೇಲನ) ಆಗಮನವನ್ನು ದೃಢತೆಯಿಂದ ಎದುರು ನೋಡುತ್ತಾ ತಾವು ಆತನೊಂದಿಗೆ ಶಕ್ತಿ ಮತ್ತು ಮಹಿಮೆಯೊಂದಿಗೆ ಉನ್ನತ ಸ್ಥಿತಿಗೇರಲು ನಿರೀಕ್ಷಿಸುತ್ತಿದ್ದ ಆ ಪವಿತ್ರ ಜನರಿಗೆ ದೊಡ್ಡ ಆಶಾಭಂಗವಾಗಿತ್ತು. ಆದರೆ ಈ ನಿರಾಶೆಯ ಹೊರತಾಗಿಯೂ ಈ ಚಳುವಳಿಗೆ ತನ್ನದೇ ಆದ ವಿನ್ಯಾಸಕರ ಪರಿಣಾಮಗಳನ್ನುಂಟು ಮಾಡಿತು. ಕರ್ತನ ಎರಡನೆಯ ಬರುವಿಕೆಯ ವಿಷಯದಲ್ಲಿ ಆಸಕ್ತಿಯನ್ನು ಜಾಗೃತಿ ಮೂಡಿಸಿತು, ಮತ್ತು ತಪ್ಪಾದ ನಿರೀಕ್ಷೆಯ ಕಾರಣದಿಂದಾಗಿ ಆಕ್ಷೇಪಣೆಗಳನ್ನು ಉಂಟುಮಾಡಿತು. ವಿನ್ಯಾಸಕರ ಪರಿಣಾಮ ಬೀರಿತು ಎಂದು ನಾವು ಹೇಳುತ್ತೇವೆ, ಯಾಕೆಂದರೆ ಸಂಶಯಾತೀತವಾಗಿ ಅದರಲ್ಲಿ ಕರ್ತನ ಕೈವಾಡವಿತ್ತು. ಅದು ಕ್ರಿಸ್ತನು ಜನಿಸಿದಾಗ ಪಂಡಿತರು ಪೂರ್ವ ದೇಶಗಳಿಂದ ಬಂದ ಮತ್ತು ಎಲ್ಲಾ ಜನರೂ ಆತನ ನಿರೀಕ್ಷೆಯಲ್ಲಿದ್ದ ಮೊದಲ ಆಗಮನದ ಕಾರ್ಯಕ್ಕೆ ಅನುಗುಣವಾದದ್ದನ್ನು ಮಾಡಿತ್ತು (ಮತ್ತಾಯ 2:1,2; ಲೂಕ 3:15). ಮಾತ್ರವಲ್ಲದೆ, ಆ ಸಮಯವು ಕ್ರಿಸ್ತನು ತನ್ನ ಮೂವತ್ತನೆಯ ವರ್ಷ ಪ್ರಾಯದಲ್ಲಿ ಪ್ರತಿಷ್ಠೆ ಹೊಂದುವ ಕೇವಲ ಮೂವತ್ತು ವರ್ಷಗಳ ಮುಂಚಿತವಾಗಿ ಆತನು ಮೆಸ್ಸೀಯನಾಗಿ ತನ್ನ ಕಾರ್ಯಗಳನ್ನು ಆರಂಭಿಸಿದ್ದಕ್ಕೆ ಅನುಗುಣವಾಗಿತ್ತು. ಮಿಲ್ಲರ್ ಚಳುವಳಿ ಎಂದು ಉಪೇಕ್ಷೆಯಾಗಿ ಕರೆಯುತ್ತಿದ್ದಾಗ್ಯೂ ಅದರಲ್ಲಿ ಭಾಗವಹಿಸಿದ ಪವಿತ್ರ ಜನರಿಗೆ ವೈಯಕ್ತಿಕ ಆಶೀರ್ವಾದಗಳನ್ನು ತರುವುದಾಗಿತ್ತು. ಅದು ದೇವರ ಪವಿತ್ರ ಗ್ರಂಥಗಳ ಕೂಲಂಕುಶ ಪರಿಶೋಧನೆಗೆ ಮತ್ತು ದೇವರ ವಾಕ್ಯಗಳಲ್ಲಿ ಮಾನವರ ಸಂಪ್ರದಾಯಕ್ಕೂ ಮೀರಿ ಭರವಸವಿಡುವಂತೆ ಅವರನ್ನು ನಡೆಸಿತು. ಅದು ದೇವರ ಮಕ್ಕಳ ಹೃದಯಗಳನ್ನು ಉತ್ಸಾಹಗೊಳಿಸಿ ಮತ್ತು ಪೋಷಿಸಿ, ಅವರನ್ನು ಪಂಥಗಳಲ್ಲಿ ಸೇರದಂತಹ ಸಾಂಗತ್ಯದಲ್ಲಿ ಅನ್ಯೋನ್ಯಗೊಳಿಸಿತು. ಯಾಕೆಂದರೆ ಆಸಕ್ತಿಯುಳ್ಳವರೆಲ್ಲರೂ ಪ್ರಧಾನವಾಗಿ ಬ್ಯಾಪ್ಟಿಸ್ಟ್‌ಗಳಾಗಿದ್ದರಲ್ಲಿ ಅವರೊಂದಿಗೆ ಎಲ್ಲಾ ಪಂಗಡಗಳವರೂ ಸೇರಿದ್ದರು. ಆಗ ಚಳುವಳಿ ಮುಗಿದ ನಂತರ, ಇವರಲ್ಲಿ ಕೆಲವರು ಹೊಸ ಪಂಥವಾಗಿ ತಮ್ಮನ್ನು ಬಂಧಿಸಿಕೊಂಡರು. ಈ ರೀತಿಯಾಗಿ ಅವರು 'ಸುಗ್ಗಿಯ' ಕಾಲದಲ್ಲಿ ದೊರೆಯುವ ಕೆಲವೊಂದು ಆಶೀರ್ವಾದಗಳಿಗೆ ತಮ್ಮನ್ನು ಕುರುಡರನ್ನಾಗಿ ಮಾಡಿಕೊಂಡರು.

ಅದೇ ವೇಳೆ, ಓದುಗರು ಗಮನಿಸಿರಬಹುದಾದಂತೆ, ನಾವು ಮಿಲ್ಲರನ ಅರ್ಥವಿವರಣೆಗಳನ್ನು ಮತ್ತು ಊಹೆಗಳನ್ನು ಬಹುಮಟ್ಟಿಗೆ ಎಲ್ಲಾ ಅಂಶಗಳನ್ನೂ ನಾವು ಅಸಮ್ಮತಿಸುತ್ತೇವೆ – ಅದರ ಉದ್ದೇಶವನ್ನು ನೋಡುವ ರೀತಿಯನ್ನು ಮತ್ತು ನಮ್ಮ ಕರ್ತನು ಬರುವ ರೀತಿಯನ್ನು ಭಿನ್ನವಾದ ಬೆಳಕಿನಲ್ಲಿ ನೋಡುವುದನ್ನು ನಾವು ಒಪ್ಪುವುದಿಲ್ಲ. ಆದಾಗ್ಯೂ ನಾವು ಆ ಚಳುವಳಿಯು ದೇವರ ಆಜ್ಞೆಯಲ್ಲಿರುವದೆಂದು, ಪ್ರತ್ಯೇಕ ಪಡಿಸುವಿಕೆ, ಶುದ್ಧೀಕರಿಸುವುದು, ಸಂಸ್ಕರಣಗೊಳಿಸುವುದು ಇವುಗಳ ಮುಖ್ಯಕಾರ್ಯವನ್ನು ಮಾಡಿ ಆ ಮೂಲಕ ಕಾಯುವ

ಜನರನ್ನು ಕರ್ತನ ಆಗಮನಕ್ಕೆ ಸಿದ್ಧಪಡಿಸುವುದನ್ನು ನಾವು ಗ್ರಹಿಸುತ್ತೇವೆ. ಇದು ತನ್ನ ಸ್ವಂತ ದಿನದಲ್ಲಿ ಶುದ್ಧೀಕರಿಸುವ ಮತ್ತು ಪರೀಕ್ಷಿಸುವ ಕಾರ್ಯವನ್ನು ಮಾಡಿರುವುದಲ್ಲದೆ, ಪ್ರವಾದನೆಗಳ ಮತ್ತು ಕರ್ತನ ಎರಡನೆಯ ಬೋಧನೆಯ ಮೇಲೆ ಆಕ್ಷೇಪಣೆಯನ್ನು ಎಸೆಯುವುದರ ಮೂಲಕ ಅದು ಅಂದಿನಿಂದಲೂ ಪ್ರತಿಷ್ಠಿತರನ್ನು ಪರೀಕ್ಷಿಸಿ ಅವರನ್ನು ಮಿಲ್ಲರ್‌ರವರ ದೃಷ್ಟಿಕೋನ ಮತ್ತು ನಿರೀಕ್ಷೆಗಳ ಬಗ್ಗೆ ಯಾವುದೇ ಸಂಪರ್ಕವಿಲ್ಲದೇ ಸಾಬೀತುಪಡಿಸಿದೆ, ಕರ್ತನ ಬರೋಣ ಮತ್ತು ಸಹಸ್ರಮಾನದ ರಾಜ್ಯ ಈ ಪ್ರಸ್ತಾಪಗಳ ಬಗ್ಗೆ ಹೇಳಿಕೆಗಳು ಪ್ರಾಪಂಚಿಕ ಬುದ್ಧಿವಂತರಿಗೆ ವಿಶೇಷವಾಗಿ ಹೆಸರು ಮಾತ್ರದ ಸಭೆಗೆ ತಾತ್ಸಾರವನ್ನು ಉತ್ತೇಜಿಸುತ್ತದೆ. ಇದು ನಿಸ್ಸಂದೇಹವಾಗಿ ಕರ್ತನ ದೈವಾನುಗ್ರಹವೇ ಆಗಿದೆ ಮತ್ತು ಒಂದು ಉದ್ದೇಶಕ್ಕಾಗಿ ಬಾಲಕನಾದ ಯೇಸುವು ಗೌರವ ನಗರವಾದ ಬೆತ್ಲೆಹೇಮಿನಲ್ಲಿ ಜನಿಸಿದ್ದರೂ ಸಹ ನಜರಾಯನೆಂದು ಕರೆಸಿಕೊಳ್ಳುವಂತೆ ನಜರೇತಿಗೆ ಕಳುಹಿಸುವುದಕ್ಕೆ ಸಮಾನವಾಗಿದೆ. ಅದು ಸುವ್ಯಕ್ತವಾಗಿ ಸತ್ಯವು "ನಿಜವಾದ ಇಸ್ರಾಯೇಲ್ಯರನ್ನು" ದೇವರ ಆಯ್ದ ರಾಷ್ಟ್ರದಿಂದ ಹೊಟ್ಟಿನಂತಿರುವುದರಿಂದ ಬೇರ್ಪಡಿಸುವವನಾಗಿದೆ. ಈ ಕಸ ಅಥವಾ ಹೊಟ್ಟು ಎಂಬುದನ್ನು ನಮ್ಮ ಕರ್ತನು ನಜರಾಯನೆಂಬ ಹೇಳಿಕೆಯಿಂದ ಓಡಿಸಲಾಯಿತು. ಆದುದರಿಂದ "ಒಳ್ಳೇದೇನಾದರೂ ನಜರೇತಿನಿಂದ ಬರುವುದುಂಟೇ?" (ಯೋಹಾನ 1:46) ಎಂಬ ಹೇಳಿಕೆಗೆ ಕಾರಣವಾಯಿತು. ಅದರಂತೆಯೇ ಕೆಲವರು ತಿರಸ್ಕಾರ ಭಾವನೆಯಿಂದ "Adventismನಿಂದ ಏನಾದರೂ ಒಳ್ಳೇದು ಬರುವುದುಂಟೋ?" ಎಂದು ಕೇಳುತ್ತಾರೆ. ಮತ್ತು ಕರ್ತನ, ಅಪೋಸ್ತೋಲರ ಮತ್ತು ಪ್ರವಾದಿಗಳ ಸಾಕ್ಷ್ಯವನ್ನು ಗಣನೆಗೆ ಬಾರದ್ದು ಎಂದು ತಳ್ಳಿಹಾಕುತ್ತಾರೆ. ಆದರೆ ನಮ್ರರೂ ಪವಿತ್ರರೂ, ದೇವರ ದೃಷ್ಟಿಯಲ್ಲಿ ಬುದ್ಧಿವಂತರಾದವರು, ಲೋಕದ ಅಂದಾಜಿನಲ್ಲಿ ಮೂರ್ಖರೆನಿಸಿಕೊಂಡರೂ ಅಂಥಃ ಮನೋಭಾವವನ್ನು ತಾಳುವುದಿಲ್ಲ.

ಆದರೆ, 'ಮಿಲ್ಲರನ ಚಳುವಳಿ' ಇದಕ್ಕಿಂತಲೂ ಹೆಚ್ಚಿನದಾಗಿದೆ: ಅದು ದಾನಿಯೇಲನ ದರ್ಶನವನ್ನು ಸರಿಯಾಗಿ ತಿಳುಕೊಳ್ಳುವುದರ ಮತ್ತು ಆ ಪ್ರವಾದನೆಯು ಸರಿಹೊಂದುವ ಕಾಲದ ಪ್ರಾರಂಭವಾಗಿದೆ. ಮಿಲ್ಲರನ ಮೂರೂವರೆ ಕಾಲದ (1260 ವರ್ಷಗಳ) ಅನ್ವಯವು ನಾವೀಗ ಕೊಟ್ಟಿರುವುದಕ್ಕೆ ಸರಿಸಮವಾಗಿದೆ. ಆದರೆ ಆತನು ಮಾಡಿದ ತಪ್ಪೇನೆಂದರೆ ಅದೇ ವಿಷಯದಲ್ಲಿ 1290 ಮತ್ತು 1335 ಅವಧಿಯನ್ನು ಪ್ರಾರಂಭಿಸದೇ ಇರುವುದು. ಆತನು ಹಾಗೆ ಮಾಡಿದ್ದರೆ ಸರಿಯಾಗಿರುತ್ತಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಆತನು ಅದನ್ನು ಮೂವತ್ತು ವರ್ಷಗಳ ಮೊದಲೇ ಕ್ರಿ.ಶ. 539ಕ್ಕೆ ಬದಲಾಗಿ ಕ್ರಿ.ಶ. 509ಕ್ಕೆ ಪ್ರಾರಂಭಿಸಿದನು. ಅದು 1335 ದಿನಗಳನ್ನು 1874ರ ಬದಲಾಗಿ 1844ಕ್ಕೆ ಮುಕ್ತಾಯಗೊಂಡಿತು*. ಆದಾಗ್ಯೂ ಅದು ಪ್ರವಾದನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಪ್ರಾರಂಭವಾಗಿದೆ. ಯಾಕೆಂದರೆ, ಕಟ್ಟಕಡೆಗೆ ಆತನು ಸರಿಯಾಗಿ ಕಂಡುಕೊಂಡ 1260ರ ಅವಧಿಯು ಮಹತ್ವದ್ದಾಗಿದೆ ಮತ್ತು ಈ ಸತ್ಯದ ಬೋಧನೆಯು, ತಪ್ಪುಗಳಿಂದ, ತಪ್ಪಾದ ಅನ್ವಯಗಳಿಂದ ಮತ್ತು ಸುಳ್ಳಾದ ಅನುಮಾನಗಳಿಂದ ಕೂಡಿದ್ದರೂ ಬೇರ್ಪಡಿಸುವ ಮತ್ತು ಅನೇಕರನ್ನು ಶುದ್ಧೀಕರಿಸುವ ಪರಿಣಾಮವನ್ನು ಹೊಂದಿದೆ. ಅದು ಕರ್ತನು ಮುಂತಿಳಿಸಿರುವ ಯುಕ್ತ ಕಾಲವಾಗಿದೆ.

ಕರ್ತನ ಹಿಂತಿರುಗುವಿಕೆಯ ರೀತಿ ಅಥವಾ ಉದ್ದೇಶವನ್ನು ಅರ್ಥಮಾಡಿಕೊಳ್ಳದೆ, ಬದಲಾಗಿ ಆತನ ಹಠಾತ್ ಕಾಣಿಸುವಿಕೆಯನ್ನು ಮತ್ತು ಒಂದೇ ದಿನದಲ್ಲಿ ಎಲ್ಲಾ ಸಂಗತಿಯ ಮುಕ್ತಾಯವನ್ನು ನಿರೀಕ್ಷಿಸುವವರಾಗಿ, ಆತನು ಎಲ್ಲಾ ಕಾಲಗಳ ಪ್ರವಾದನೆಯು ಅಲ್ಲಿ ಮುಕ್ತಾಯಗೊಳ್ಳುತ್ತವೆ ಎಂದು ಆತನು ಊಹಿಸಿದನು. ಮತ್ತು ಆತನ ಗುರಿ ಮತ್ತು ಪ್ರಯತ್ನವು ಎಲ್ಲರನ್ನೂ ಈ ಸಾಮಾನ್ಯವಾದ ಅಂತ್ಯಕ್ಕೆ ಒತ್ತಾಯಪಡಿಸುವುದಾಗಿತ್ತು. ಆದುದರಿಂದ ಆತನ ವಿಫಲತೆಯುಂಟಾಯಿತು, ಇದರಿಂದಾಚೆ ದೇವರು ಯಾರಿಗೂ ಜ್ಞಾನಪ್ರಕಾಶವನ್ನು ಕೊಡಲಿಲ್ಲ, ಮುಂದೆ ಕೊಡಬೇಕಾಗಿದ್ದ ಜ್ಞಾನಪ್ರಕಾಶಕ್ಕೆ ಅದು ಇನ್ನೂ ತಕ್ಕ ಸಮಯವಾಗಿರಲಿಲ್ಲ.

ಸಹೋದರ ಮಿಲ್ಲರನು ಬ್ಯಾಪ್ಟಿಸ್ಟ್ ಸಭೆಯ ಒಬ್ಬ ನಿಷ್ಠಾವಂತ ಮತ್ತು ಗೌರವಾನ್ವಿತ ಸದಸ್ಯನಾಗಿದ್ದನು. ಪರಿಶುದ್ಧ ಗ್ರಂಥಗಳ ಜಾಗರೂಕ ವಿದ್ಯಾರ್ಥಿಯಾಗಿದ್ದುದರಿಂದ ಆತನ ಮುಂದೆ ಪ್ರವಾದನೆಗಳು ಬಿಚ್ಚತೊಡಗಿದವು. ಅವುಗಳ ಬಗ್ಗೆ ಅವುಗಳ ಸರಿಯಾದ ಅನ್ವಯಿಸುವಿಕೆಗಳ ಬಗ್ಗೆ ಆತನು ಖುದ್ದಾಗಿ ಮನದಟ್ಟುಪಡಿಸಿಕೊಂಡ ನಂತರ, ಆತನು ತನ್ನ ದೃಷ್ಟಿಕೋನವನ್ನು ಮುಖ್ಯವಾಗಿ ಮೊದಲು ಬ್ಯಾಪ್ಟಿಸ್ಟ್ ಸೇವಕರುಗಳ ಮೇಲೆ ಬಿತ್ತಲು, ನಂತರದಲ್ಲಿ ಎಲ್ಲಾ

* ನಾವು ಸಹೋದರ ಮಿಲ್ಲರ್ ರವರ ಅರ್ಥವಿವರಣೆಯನ್ನು ಹೋಲಿಸಲು ಅವರ ಬರಹಗಳನ್ನು ದೊರಕಿಸಿಕೊಳ್ಳುವುದು ನಮ್ಮಿಂದ ಸಾಧ್ಯವಾಗುತ್ತಿಲ್ಲ. ನಾವೂ ಕೇವಲ ದಿನಾಂಕಗಳನ್ನು ಆತನು ಪ್ರವಾದನೀಯ ಸಂಖ್ಯೆಯನ್ನು ಅನ್ವಯಿಸಿದ್ದರಿಂದ ಕಲಿತುಕೊಂಡಿದ್ದೇವೆ.

ವರ್ಗಗಳ, ಪಂಗಡದವರ ಮೇಲೆ ಬಿತ್ತಲು ಪ್ರಾರಂಭಿಸಿದನು. ಈ ಕಾರ್ಯವು ಹರಡಿದಾಗ ಆತನು ಅನೇಕ ಸಹ ದುಡುಮೆಗಾರರೊಡನೆ ಪ್ರಯಾಣಮಾಡಿ, ವ್ಯಾಪಕವಾದ ರೀತಿಯಲ್ಲಿ ಬೋಧಿಸಿದನು. ಬ್ಯಾಪ್ಟಿಸ್ಟ್ ಸದಸ್ಯರ ನಡುವೆ ಈ ಕಾರ್ಯದ ಪ್ರಾರಂಭವನ್ನು ಸಾಧ್ಯವಾದಷ್ಟು ಮಟ್ಟಿಗೆ 1829ರ ಆತನ ಆತ್ಮಕಥೆಯಿಂದ ತಿಳುಕೊಳ್ಳಬಹುದು. ಬ್ಯಾಪ್ಟಿಸ್ಟ್ ಸಭೆಯ Elder Fuller ಎಂಬುವವರು Poultney Vt. ಎಂಬಲ್ಲಿ ಅವರ ದೃಷ್ಟಿಕೋನಗಳ ಬಗ್ಗೆ ಬೋಧಿಸಿದ ಮೊದಲ ಪರಿವರ್ತಕರಾಗಿದ್ದರು ಮೂರು ವರ್ಷಗಳ ನಂತರ ಬರೆದ ಪತ್ರದಲ್ಲಿ ಶ್ರೀ ಮಿಲ್ಲರ್ ರವರು ಹೀಗೆ ಹೇಳುತ್ತಾರೆ:–

"ಕರ್ತನು ಬೀಜವನ್ನು ಹರಡುತ್ತಿದ್ದಾನೆ, ನಾನೀಗ ಈ ಸಿದ್ಧಾಂತವನ್ನು ಬೋಧಿಸುವ ನಾನಲ್ಲದೆ ಹೆಚ್ಚು ಕಡಿಮೆ ಬೇರೆ ಎಂಟು ಮಂದಿ ಬೋಧಕರನ್ನು ಲೆಕ್ಕವಾಡುತ್ತೇನೆ. ನನ್ನ ದೃಷ್ಟಿಕೋನವನ್ನು ಸ್ವೀಕಾರಮಾಡಿಕೊಂಡಿದ್ದೇವೆಂದು ಹೇಳಿಕೊಳ್ಳುವ ಒಂದು ನೂರಕ್ಕೂ ಹೆಚ್ಚು ಖಾಸಗಿ ಸಹೋದರರು ಇದ್ದಾರೆಂಬುದು ನನಗೆ ತಿಳಿದದೆ. ಅದು ಇದ್ದಂತೆಯೇ ಇರಲಿ. "ಸತ್ಯವು ಬಲವುಳ್ಳದ್ದು ಮತ್ತು ಅದು ಮೇಲುಗೈ ಸಾಧಿಸುತ್ತದೆ"

ಈ ರೀತಿಯಲ್ಲಿ ಮಿಲ್ಲರ್ ಚಳುವಳಿಗೆ ಪ್ರತ್ಯೇಕಿಸುವ ಕಾರ್ಯವು ತಿಳಿಸಿದ ಸಮಯಕ್ಕೆ ಮುಂಚಿತವಾಗಿ 1290 ದಿನಗಳ ಅಂತ್ಯದಲ್ಲಿ 1829ಕ್ಕೆ ಸರಿಯಾಗಿ ಪ್ರಾರಂಭವಾಯಿತು. ಈಗ 1335 ದಿನಗಳ ವರಗೆ ನಿಷ್ಠಾವಂತರಾಗಿ ಕಾಯುವವರು ಅದನ್ನು ಹೇಗೆ ತಲುಪುವರು? ಯಾರು ಆ ರೀತಿಯಾಗಿ ಕಾದಿದ್ದಾರೆ?

ಕೆಲವು ದೇವರ ಮಕ್ಕಳು, "ಪವಿತ್ರ ಜನರು" (ಅವರಲ್ಲಿ ಮಿಲ್ಲರ್ ಚಳುವಳಿಯೊಂದಿಗೆ, ಅಥವಾ ತರುವಾಯ ಸ್ಥಾಪಿತವಾದ ಎರಡನೆಯ ಅಡ್ವೆಂಟಿಸ್ಟ್ ಸಭೆಯೊಂದಿಗೆ ಸಂಬಂಧಿಸಿದವನಲ್ಲವಾದರೂ ಅದರಲ್ಲಿ ಲೇಖಕನೂ ಒಬ್ಬನು): ಮಿಕಾಯೇಲನ ರಾಜ್ಯಕ್ಕೆ ನಿಷ್ಠಾವಂತರಾಗಿ ಕಾಯುತ್ತಿರುವರು. ನಾವು ಸಂತೋಷವಾಗಿ ನಮ್ಮ ತಂದೆಯ ಯೋಜನೆಯು 1874ರಲ್ಲಿ ಮತ್ತು ಅಂದಿನಿಂದ 1335ದಿನಗಳ ಅಂತ್ಯದವರೆಗೆ ಅದ್ಭುತವಾದ ಸ್ಪಷ್ಟತೆಯಿಂದ ಪ್ರಕಟಗೊಳ್ಳುವ 'ದೈವಕೃಪೆಗಾಗಿ' ನಾವು ಸಂತೋಷದಿಂದ ಸಾಕ್ಷಿಯನ್ನು ಹೊತ್ತುಕೊಳ್ಳುತ್ತೇವೆ.

ಈ ದೈವಕೃಪೆಯನ್ನು ವ್ಯಕ್ತಪಡಿಸಲು ನಮ್ಮಲ್ಲಿ ಶಬ್ದಗಳೇ ಇಲ್ಲವಾಗಿವೆ! ರಾಜ್ಯದ ಈ ಹೊಸ ದ್ರಾಕ್ಷಾರಸದಿಂದ ಆತ್ಮದಲ್ಲಿ ಉಲ್ಲಾಸಗೊಂಡವರು ಮಾತ್ರವೇ ನಾವು ಅವರಿಗೆ ವಿವರಿಸಿದರೆ ಅದನ್ನು ಅವರು ಮೆಚ್ಚಿಕೊಳ್ಳುವರು. ಆದುದರಿಂದ ಇದು ಹೇಳುವದಕ್ಕಿಂತ ಸ್ವತಃ ಅನುಭವಿಸುವುದಾಗಿದೆ. ಅದು ಆ 1335 ಪ್ರವಾದನೀಯ ಸಾಂಕೇತಿಕ ದಿನಗಳಲ್ಲಿ ಮತ್ತು ಅಂದಿನಿಂದ ಕರ್ತನ ಪ್ರಸನ್ನತೆಯ ಅಮೂಲ್ಯ ದೃಷ್ಟಿಕೋನವು ಮತ್ತು ನಾವೀಗಲೂ ಸುವಾರ್ತಾ ಯುಗದ ಸುಗ್ಗಿಯ ಕಾಲದಲ್ಲಿ ಮತ್ತು ಮೀಕಾಯೇಲನ (ಕ್ರಿಸ್ತನ) ರಾಜ್ಯದ ಸ್ಥಾಪನೆಯ ಕಾಲದಲ್ಲಿ ಜೀವಿಸುವ ಸತ್ಯವು ತಿಳಿದು ಬಂತು.

ಆಹಾ! ಅನುಕೂಲಕರವಾದ ಆಶೀರ್ವಾದದಾಯಕ ಸಮಯ! ಆಹಾ!, ದೇವರ ಯೋಜನೆಯ ಸಾಮರಸ್ಯ, ಸೌಂದರ್ಯ ಮತ್ತು ಭವ್ಯತೆಯು 1335 ದಿನಗಳಿಗೆ ಮುಟ್ಟಿದಾಗ ಪ್ರಕಟವಾಗಲು ಪ್ರಾರಂಭಿಸಿತು. ಅದು ನಮ್ಮ ಸಾಮರ್ಥ್ಯವು ಇರುವಷ್ಟರ ಮಟ್ಟಿಗೆ, ಹೇಳಬೇಕಾದು ದೆಂದರೆ ಈ "ದೈವಕೃಪೆಯ" ಮತ್ತು ದೈವಿಕ ಯೋಜನೆಯ ಸಂಪೂರ್ಣ ಪ್ರಕಟಗೊಳ್ಳುವಿಕೆಯು ಈಗ ಜೀವಿಸುವ ಎಲ್ಲಾ ಪವಿತ್ರ ಜನರು ಪ್ರಕಾಶನಗೊಂಡಿರುವ ಈ SCRIPTURE STUDIES Series ಮೂಲಕ ಅರ್ಥಮಾಡಿಕೊಳ್ಳುವ ಕಾಲ ಇದಾಗಿದೆ. ಆದ್ದರಿಂದ 'ಪವಿತ್ರಜನ'ರಲ್ಲದೆ ಬೇರೆ ಯಾರೂ ಇದನ್ನು ಅರ್ಥಮಾಡಿಕೊಳ್ಳಲಾರರು. ಅದೊಂದು ಭಾಗ್ಯವಾಗಿ ದಯಪಾಲಿಸಲ್ಪಟ್ಟಿದೆ. ಯಾವ ಕೆಡುಕರೂ ಇದನ್ನು ಅರ್ಥಮಾಡಿಕೊಳ್ಳಲಾರರು; ಮತ್ತು ಲೋಕದೊಂದಿಗೆ ಸಹವಾಸವುಳ್ಳ 'ಪವಿತ್ರಜನರು', ಕೆಡುಕರೊಂದಿಗೆ, ಅವಿವೇಕತನದಿಂದ ನಿಲ್ಲುವವರು ಮತ್ತು ದಿಕ್ಕರಿಸಲ್ಪಟ್ಟ ವರೊಂದಿಗೆ ಕೂಡ್ರುವವರು ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲ ಮತ್ತು ಈಗ ಸಕಾಲದ ಪವಿತ್ರರಿಗೆ ಮಾತ್ರ, ನಿಜವಾದ "ಜಾಣ"ರಿಗೆ ಈ ದೈವಕೃಪೆ ಅರ್ಥವಾಗುವುದು. ಈ ಪವಿತ್ರರು ನಿಜವಾಗಿಯೂ ವಿವೇಕಶಾಲಿಗಳಾಗಿದ್ದು "ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವರಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವರು" (ಕೀರ್ತನೆ 1:1,2).

ಮೀಕಾಯೇಲನ ರಾಜ್ಯದ ಈ ಸಂದೇಶವು 1829ರ ನಂತರ ಕ್ರಮೇಣವಾಗಿ ಬಿಚ್ಚಿಕೊಳ್ಳುತ್ತಿದೆ ಮತ್ತು ಇದು ಪ್ರಕಟನೆಯ ಗ್ರಂಥದಲ್ಲಿ (ಅಧ್ಯಾಯ 10:2, 8–10) 'ಚಿಕ್ಕ ಸುರುಳಿ' ಎಂಬುದಾಗಿ ಸಾಂಕೇತಿಕವಾಗಿ ಪ್ರತಿನಿಧಿಸಲ್ಪಟ್ಟಿದೆ. ಇದನ್ನು ಯೋಹಾನನು ಪ್ರತಿನಿಧಿಸಿದ ಪವಿತ್ರ ಜನರಲ್ಲಿ ಬುದ್ಧಿವಂತರು ತಿನ್ನಬೇಕೆಂದು ಆದೇಶಿಸಲಾಯಿತು (ವಚನ 9). 10ನೇ ವಚನದಲ್ಲಿ ವ್ಯಕ್ತಪಡಿಸಿದಂತೆ ಯೋಹಾನನ ಅನುಭವವು ಈ

ಸತ್ಯವನ್ನು ಸ್ವೀಕರಿಸುವವರ ಎಲ್ಲರ ಅನುಭವವೂ ಆಗಿದೆ. ಅವುಗಳು ಅದ್ಭುತಕರವಾದ ಸಿಹಿಯನ್ನುಂಟು ಮಾಡುತ್ತವೆ: ಆಹಾ! ದೈವಕೃಪೆಯೇ! ಆದರೆ ನಂತರದ ಪರಿಣಾಮವು ಯಾವಾಗಲೂ ಹೆಚ್ಚು ಕಡಿಮೆ ಉಪದ್ರವದ ಕಹಿಯೊಂದಿಗೆ ಸಿಹಿಯ ಬೆರಕೆಯಾಗಿದೆ. ಯಾರು ತಾಳ್ಮೆಯಿಂದ ಕಡೇವರೆಗೂ ಸಹಿಸಿಕೊಳ್ಳುತ್ತಾರೋ ಅವರ ಮೇಲಿನ ಪರಿಣಾಮವು ಶುದ್ಧವಾಡುವುದೂ, ಪವಿತ್ರಗೊಳಿಸುವುದೂ, ಸಂಸ್ಕರಿಸುವುದೂ ಆಗಿದೆ. ಈ ರೀತಿಯಲ್ಲಿ ಕ್ರಿಸ್ತನ ವಧುವನ್ನು ವಿವಾಹಕ್ಕೆ ತಯಾರುಪಡಿಸುವುದೂ, ಮತ್ತು ಉನ್ನತಿಗೆ ಏರಿಸುವುದೂ ಇವು ಸಿದ್ಧತೆಯ ದಿನದ ಅಂತ್ಯಕ್ಕೆ ಯುಕ್ತವಾಗಿದೆ.

ಈ ನಿರಾಶೆಗೆ ಸಂಬಂಧಪಟ್ಟಂತೆ ನಾವು ತೋರಿಸಿರುವಂತೆ, ಇದು ಒಂದು ಆಶೀರ್ವಾದವಾಗಿದೆ ಮತ್ತು ದರ್ಶನದ ಸರಿಯಾದ ಅರ್ಥವಿವರಣೆಯೂ ಆಗಿದೆ. ಪ್ರವಾದಿಯಾದ ಹಬಕ್ಕೂಕನಿಗೆ ಈ ಪ್ರೋತ್ಸಾಹದ ಮಾತುಗಳನ್ನು ಬರೆಯುವಂತೆ ಮಾಡಲಾಗಿದೆ – "ನಿನಗಾದ ದರ್ಶನವನ್ನು ಬರೆ; ಓದುವವರು ಶೀಘ್ರವಾಗಿ ಓದುವಂತೆ ಹಲಿಗೆಗಳ ಮೇಲೆ ಅದನ್ನು ಕೆತ್ತು. ಅದು ಕ್ಲುಪ್ತಕಾಲದಲ್ಲಿ ನೆರವೇರತಕ್ಕದ್ದು ... ತಡವಾದರೂ ಅದಕ್ಕೆ ಕಾದಿರು" [ಆಹಾ! ಆತನ ಆಶೀರ್ವಾದತನವು 1335 ದಿನಗಳ ಕಾಲ ಕಾಯುತ್ತಿರುತ್ತದೆ!]. ಅದು ಬಂದೇ ಬರುವುದು, ತಾಮಸವಾಗದು (ಹಬಕ್ಕೂಕ 2:2,3). ಅದು ತಡವಾದಂತೆ ಕಂಡುಬಂದಿತಾದರೂ, ಹಾಗಲ್ಲ. ಆದರೆ ಅದು ಮಿಸ್ಟರ್ ಮಿಲ್ಲರ್‌ರವರ ವಿಷಯದಲ್ಲಿ ಭಾಗಶಃ ತಪ್ಪಾಗಿದೆ. ಇದನ್ನು ದೇವರು ಮೊದಲೇ ತಿಳಿದಿದ್ದು ಪವಿತ್ರ ಜನರ ಪರೀಕ್ಷೆಗಾಗಿ ಇದನ್ನು ಅನುಮತಿಸಿದನು.

ಪ್ರತಿಷ್ಠೆಯ ಪುರಾವೆಯಾಗಿ, ಈ ಚಳುವಳಿಯಿಂದ ಉಂಟಾಗಿರುವ ಸತ್ಯವೇದಾಧ್ಯಯನ ಮತ್ತು ವಿಶ್ವಾಸವನ್ನು ನಾವು 1844ರ ಆಶಾಭಂಗದ ನಂತರ ಮಿಸ್ಟರ್ ಮಿಲ್ಲರ್‌ರವರು ಮತ್ತು ಅವರೊಂದಿಗೆ ನಿರಾಶೆ ಹೊಂದಿದವರಿಗೆ ಆತನು ಬರೆದ ಪತ್ರವೊಂದರಿಂದ ಉಲ್ಲೇಖಿಸುತ್ತೇವೆ:

"ಯಾವಾಗಲೂ ನಮ್ಮ ಪರವಾಗಿರುವ ದೇವರನ್ನು ನಾವು ಸ್ತುತಿಸುತ್ತೇವೆ, ನಾವು ಯಾವಾಗಲೂ ಮಾಡುವಂತೆ ಕೇಳಿಸಿಕೊಳ್ಳುವಾಗ, ನನ್ನ ಮತ್ತು ನಿಮ್ಮ ಆಶಾಭಂಗವು ನಿಮ್ಮಲ್ಲಿ, ಮತ್ತು ನಮ್ಮಲ್ಲಿಯೂ ಸಹ ಆಳವಾದ ಅಪಮಾನವನ್ನು, ನಮ್ಮ ಹೃದಯಗಳ ಜಾಗರೂಕ ಪರೀಕ್ಷೆಯ ಅಗತ್ಯತೆಯನ್ನುಂಟು ಮಾಡಿದೆ ಎಂದು ನಾವು ಭಾವಿಸುತ್ತೇವೆ. ಮತ್ತು ನಾವು ನಮ್ರರಾದಾಗಲೂ, ಕೆಡುಕರ ಮತ್ತು ಹಠಮಾರಿ ಸಂತತಿಯವರ ಗೇಲಿಯಿಂದಲೂ ಒಂದು ಮಟ್ಟದಲ್ಲಿ ನೋವುಂಡವರಾಗಿದ್ದರೂ ನಾವು ಭಯಪಡಲಿಲ್ಲ, ಬಿದ್ದುಹೋಗಲಿಲ್ಲ. ನೀವೆಲ್ಲರೂ ನಿಮ್ಮ ನಿರೀಕ್ಷೆಯ ಕಾರಣದ ಬಗ್ಗೆ ವಿಚಾರಿಸುವಾಗ, ನಿಮ್ಮ ಸತ್ಯವೇದಗಳನ್ನು ತೆರೆಯಿರಿ ಮತ್ತು ನಮ್ರತೆ ಹಾಗೂ ಭಯದಿಂದ ನೀವು ಮಹಾದೇವರೂ ಮತ್ತು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಮಹಿಮಾಯುತ ಕಾಣಿಸಿಕೊಳ್ಳುವಿಕೆಯನ್ನು ಯಾಕೆ ನಿರೀಕ್ಷಿಸಿದಿರಿ ಎಂಬುದನ್ನು ವಿಚಾರಿಸುವವರಿಗೆ ತೋರಿಸಿರಿ. ನೀವು ಒಂದು ಏಕೈಕ ಸಂದರ್ಭದಲ್ಲಿಯೂ ನಿಮ್ಮನ್ನು ವಿಚಾರಿಸುವವರನ್ನು ನಿಮ್ಮ ವಿಶ್ವಾಸದ ಕಾರಣ ಏನೆಂಬುದನ್ನು ತಿಳಿಸಲು ನಿಮ್ಮ ಸೇವಕರಿಗೆ ಒಪ್ಪಿಸದಿರಿ (ministries). ನಿಮ್ಮ ವಿಶ್ವಾಸದ ಅರಿಕೆಯು ದೇವರ ಪರಿಶುದ್ಧ ಗ್ರಂಥವಾಗಿದೆ..... ನಿಮ್ಮ ತತ್ವಜ್ಞಾನವು ದೇವರಿಂದ ಇಳಿದು ಬರುವ ನಿಮ್ಮ ವಿವೇಕವು. ನಿಮ್ಮ ಅನ್ಯೋನ್ಯತೆಯ ಬಂಧನವು ಭಕ್ತರ ಪ್ರೀತಿ ಮತ್ತು ಸಾಂಗತ್ಯವಾಗಿದೆ; ನಿಮ್ಮ ಬೋಧಕನು ಪವಿತ್ರಾತ್ಮನಾಗಿದ್ದಾನೆ; ಮತ್ತು ನಿಮ್ಮ ಪ್ರಾಧ್ಯಾಪಕನು ಕರ್ತನಾದ ಯೇಸುಕ್ರಿಸ್ತನೇ ಆಗಿದ್ದಾನೆ.... ನಾವು ನಿಮ್ಮನ್ನು ಎಚ್ಚರಿಸಿ ಪ್ರಬೋಧಿಸುವುದೇನೆಂದರೆ, ಸಂತರುಗಳ ಎಲ್ಲ ಪ್ರೀತಿ ಮತ್ತು ಸಾಂಗತ್ಯದಿಂದ ಈ ನಿರೀಕ್ಷೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು, ಅದು ದೇವರ ವಾಕ್ಯದಲ್ಲಿರುವ ಪ್ರತಿಯೊಂದು ವಾಗ್ದಾನದಲ್ಲಿಯೂ ದೃಢಪಡಿಸಲ್ಪಟ್ಟಿದೆ. ಅದು ನಿಮಗೆ ಎರಡು ನಿರ್ವಿಕಾರ ಸಂಗತಿಗಳಿಂದ ಸುರಕ್ಷಿಸಲ್ಪಟ್ಟಿದೆ. ಅವುಗಳೆಂದರೆ ದೇವರ ಸಮಾಲೋಚನೆ ಮತ್ತು ಪ್ರಮಾಣ. ಇವುಗಳಲ್ಲಿ ಆತನು ಸುಳ್ಳು ಹೇಳುವುದು ಸಾಧ್ಯವೇ ಇಲ್ಲ. ಅದು ಕ್ರಿಸ್ತನ ಜೀವಿತದಿಂದ, ಆತನ ಮರಣದಿಂದ, ರಕ್ತದಿಂದ ಮತ್ತು ಪುನರುತ್ಥಾನದಿಂದ ಪ್ರಮಾಣೀಕರಿಸಲ್ಪಟ್ಟಿದೆ ಮತ್ತು ಮುದ್ರಿಸಲ್ಪಟ್ಟಿದೆ... ಎಂದಿಗೂ ಅಂಜದಿರಿ ಸಹೋದರರೇ, ಏನು ಹೇಳಬೇಕೆಂದು ದೇವರು ನಿಮಗೆ ಹೇಳಿದ್ದಾನೆ, ಆತನು ನಿಮಗೆ ಹೇಳಿದಂತೆ ಮಾಡಿ, ಅದರ ಪರಿಣಾಮಗಳ ಬಗ್ಗೆ ಆತನು ಜಾಗರೂಕತೆ ವಹಿಸುವನು. ದೇವರು ನಿಮಗೆ ಹೇಳುವುದೇನೆಂದರೆ ನೀವು ಅವರಿಗೆ ತಿಳಿಸಿರಿ. "ಕ್ಲುಪ್ತಕಾಲವು ಹತ್ತಿರಿಸಿದೆ, ದಿವ್ಯದರ್ಶನಗಳೆಲ್ಲಾ ಸಾರ್ಥಕವಾಗುವುದು ಸಮೀಪ" (ಯೆಹೆಜ್ಕೇಲ 12:22,23)... ಇದು ನನಗೆ ದೇವರ ಹಸ್ತವು ಇದರಲ್ಲಿದೆ ಎಂಬುದಕ್ಕೆ ಸುಮಾರಾಗಿ ಪ್ರತಿಪಾದನೆಯಾಗಿದೆ. ಅನೇಕರ ಸಹಸ್ರಾರು ಮಂದಿಯನ್ನು ಸಮಯದ ಬೋಧನೆಗಳಿಂದ

ದೇವರ ಪರಿಶುದ್ಧ ಗ್ರಂಥವನ್ನು ಅಧ್ಯಯನ ಮಾಡುವಂತೆ ಮಾಡಲಾಯಿತು.... ದೇವರ ಜ್ಞಾನವು ಬಹಳ ಹೆಚ್ಚಿನ ಮಟ್ಟದಲ್ಲಿ ನಮ್ಮ ಹಾದಿಯನ್ನು ಗುರುತಿಸಿದೆ, ಆತನು ಅದನ್ನು ಅಂಥಾಃ ಒಳ್ಳೆಯವರಿಗಾಗಿ ಸಂಚುಮಾಡಿದ್ದಾನೆ. ಮತ್ತು ಅದನ್ನು ಆತನ ಸ್ವಂತ ಸಮಯದಲ್ಲಿ ಮತ್ತು ರೀತಿಯಲ್ಲಿ ನೆರವೇರಿಸುತ್ತಾನೆ"

ಕ್ರಿಸ್ತನ ಒಂದು ಸಾಮ್ಯವನ್ನು ಕಾಯುವ ಕಾಲದ ದೃಷ್ಟಾಂತವಾಗಿ ನೀಡಲಾಗಿದೆ. ಇಲ್ಲಿ 1844ರಲ್ಲಿ 1335 ದಿನಗಳ ಅಂತ್ಯದ ಬಗ್ಗೆ ಮನವರಿಕೆಯಾಗುತ್ತದೆ. ನಾವು ಅದನ್ನು "ಹತ್ತು ಕನ್ಯೆಯರ ಸಾಮ್ಯ" ದಲ್ಲಿ ನೋಡುತ್ತೇವೆ.

### ಹತ್ತು ಮಂದಿ ಕನ್ಯೆಯರ ಸಾಮ್ಯ
(ಮತ್ತಾಯ 25: 1–12)

### The Parable of the Ten Virgins

ಈ ಸಾಮ್ಯವು 'ಆಗ' ಎಂಬ ಪದದಿಂದ ಪ್ರಾರಂಭವಾಗುತ್ತದೆ. ಹೀಗೆ ಅದು ಕರ್ತನ ದಿನದಲ್ಲಿ ಒಮ್ಮೆಲೇ ಅನ್ವಯವಾಗುವುದಲ್ಲ. ಮುಂದೆ ಯಾವಾಗಲಾದರೂ ಅನ್ವಯವಾಗಲಿದೆ ಎಂದು ಸೂಚಿಸುತ್ತದೆ. "ಆಗ ಪರಲೋಕ ರಾಜ್ಯವು (ಅದರ ಭ್ರೂಣಾವಸ್ತೆಯಲ್ಲಿ – ಕೆಲವು ಅಥವಾ ಎಲ್ಲಾ ಪವಿತ್ರ ಜನರನ್ನು, ಆ ರಾಜ್ಯದ ಬಾಧ್ಯಸ್ತಿಕೆಗೆ ಉಮೇದುವಾರರು ಗಳಾಗಿರುವವರನ್ನು ಪ್ರನಿಧಿಸುವುದಾಗಿದ್ದು) ಹತ್ತು ಮಂದಿ ಕನ್ನಿಕೆಯರಿಗೆ ಹೋಲಿಕೆಯಾಗಿರುವುದು. ಅವರುಗಳು ತಮ್ಮ ಆರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಎದುರುಗೊಳ್ಳಲು ಹೋದರು. ಅವರಲ್ಲಿ ಐವರು ಬುದ್ಧಿವಂತೆಯರಾಗಿದ್ದರು, ಉಳಿದ ಐವರು ಬುದ್ಧಿ ಇಲ್ಲದವರಾಗಿದ್ದರು.

ಸಂಖ್ಯೆಯಾಗಲೀ ಅಥವಾ ಅನುಪಾತವಾಗಲೀ ಪ್ರಾಮುಖ್ಯವಾದುದಲ್ಲ; ಈ ಸಾಮ್ಯವು ನಮಗೆ ದೇವರ ರಾಜ್ಯದ ಬಾಧ್ಯಸ್ಥರ ಚಳುವಳಿಯ ಬಗ್ಗೆ ತಿಳಿಸುತ್ತದೆ. ಅವರು ಮದಲಿಂಗನನ್ನು ಎದುರುಗೊಳ್ಳಲು ಕಾಯುತ್ತಿದ್ದರು, ಈ ಚಳುವಳಿಯಲ್ಲಿ ಎರಡು ವರ್ಗದವನ್ನು ಪ್ರಕಟಗೊಂಡಿದ್ದಾರೆ. ಮತ್ತು ಅವರನ್ನು ಬುದ್ದಿವಂತೆಯರು, ಮೂರ್ಖರು ಎಂಬುದಾಗಿ ಕರೆಯಲಾಗಿದೆ. 'ಕನ್ಯೆ' ಎಂಬ ಪದವು ಪವಿತ್ರತೆಯನ್ನು ಸೂಚಿಸುತ್ತದೆ. ಹೀಗಾಗಿ ಸಾಮ್ಯದಲ್ಲಿ ಪ್ರತಿನಿಧಿಸಲ್ಪಟ್ಟಿರುವ ಬುದ್ಧಿವಂತೆಯರು, ಬುದ್ದಿ ಇಲ್ಲದವರು "ಪವಿತ್ರ ಜನರನ್ನು'' ಪ್ರತಿನಿಧಿಸುತ್ತಾರೆ. ವಾಸ್ತವವಾಗಿ, ಮದಲಿಂಗನನ್ನು ಭೇಟಿಮಾಡಲು ಹಂಬಲಿಸುವ ಯಾವುದೇ ಪ್ರೇಮಿಯಾಗಲೀ, ಅವರಲ್ಲಿ ಹೆಚ್ಚಿನವರು ಮೂರ್ಖರಾದರೂ ಪಾಪವನ್ನು ಪ್ರೀತಿಸುವವರಲ್ಲ.

ನಮ್ಮ ಕರ್ತನು ಗಮನಿಸುವ ಈ ಸಾಮ್ಯದ ಚಳುವಳಿಯು ಮಿಲ್ಲರ್ ಚಳುವಳಿಯ ಹೊಂದಾಣಿಕೆಗೆ ಅನುಗುಣವಾಗಿದೆ. ಮತ್ತು ಅದು ಇನ್ನೂ ಚಾಲನೆಯಲ್ಲಿದೆ. ಅದು ಒಬ್ಬ ಬ್ಯಾಪ್ಟಿಸ್ಟ್‌ನಿಂದ ಪ್ರಾರಂಭಗೊಂಡರೂ, ಅದೊಂದು ಪಂಥರಹಿತ ಚಳುವಳಿಯಾಗಿದ್ದು, ಅದರಲ್ಲಿ ಎಲ್ಲಾ ಪಂಗಡಗಳ ಬಹಳಷ್ಟು ಭಕ್ತರುಗಳು ಮತ್ತು ಪ್ರಾಮಾಣಿಕರು ಸೇರಿಕೊಂಡಿದ್ದರು. ಆ ಕಾಲದ ವಿವರಗಳಲ್ಲಿ ನೋಡುವಾಗ ಅವರ ಉತ್ಸಾಹದ ತೀಕ್ಷ್ಣತೆ ಮುಂತಾದವುಗಳಿಂದ ಸ್ತ್ರೀ ಪುರುಷರು ಅವರ ದೃಢ ನಿಶ್ಚಯಗಳನ್ನು ಪ್ರಾಮಾಣಿಕವಾಗಿ ಕಾರ್ಯಗತ ಗೊಳಿಸುವವರಾಗಿದ್ದರು ಎಂಬುದು. ನಾವು ಆ ದೃಢನಿಶ್ಚಯಗಳೊಂದಿಗೆ ಹೊಂದಿಕೆಯಾಗದಿದ್ದರೂ ಅವರು ನಮ್ಮ ಹೃದಯಗಳನ್ನು ಮೆಚ್ಚುಗೆಯಿಂದ ಭರಿಸುತ್ತಾರೆ. ಹಲವಾರು ಭಾಷೆಗಳಲ್ಲಿ ಕರಪತ್ರಗಳನ್ನು ಕಿರುಪುಸ್ತಕಗಳನ್ನು ಮುದ್ರಿಸಿ ಲೋಕಾದ್ಯಂತ ಸುವಾರ್ತೆಯನ್ನು ಸಾರಲು ಹಣವನ್ನು ನೀರಿನಂತೆ ಸುರಿಯಲಾಯಿತು. ಎಲ್ಲಾ ಪಂಗಡಗಳ ಸಭೆಗಳಲ್ಲಿ ಒಂದು ಉಜ್ಜೀವನ ಉತ್ಸಾಹವು ಹರಡಿತೆಂದು ಹೇಳಲಾಗಿದೆ. ಮತ್ತು ಈ ಬೋಧನೆಯ ಪ್ರಭಾವದಲ್ಲಿದ್ದ ಕೆಲವು ಸಭೆಗಳಲ್ಲಿ, ಕೊಡಲು ಸಾಧ್ಯವಾದಷ್ಟು ಹಣವನ್ನು ಹಣವುಳ್ಳವರು ಪ್ರವಚನ ಪೀಠದ ಮುಂದೆ ಗುಡ್ಡೆಹಾಕಿದರು, ಹಣದ ಅಗತ್ಯವಿದ್ದವರು ನಿರ್ಬಂಧವಿಲ್ಲದೆ ತೆಗೆದುಕೊಳ್ಳಬಹುದಿತ್ತು; ಮತ್ತು ಆ ಕಾಲದ ನಂಬಿಗಸ್ಥರ ನಿಷ್ಠಾವಂತಿಕೆ ಮತ್ತು ಉತ್ಸಾಹವು ಎಷ್ಟಿತ್ತೆಂದರೆ, ದೇವರಿಗೆ ಪ್ರತಿಷ್ಠಿಸಲ್ಪಟ್ಟ ಹಣವನ್ನು ಕಾಯುವ ಅಗತ್ಯವಿದ್ದಿಲ್ಲವೆಂದು ಹೇಳಲಾಗಿದೆ. ಅದರ ಅಗತ್ಯವಿಲ್ಲದವರು ಅದನ್ನು ಮುಟ್ಟುತ್ತಲೂ ಇರಲಿಲ್ಲ.

ಕನ್ಯೆಯರ ಸಾಮ್ಯದಲ್ಲಿ ಎಲ್ಲರ ಬಳಿಯೂ ದೀಪಾರತಿಗಳಿದ್ದವು, ಅದನ್ನು ಸಜ್ಜುಗೊಳಿಸಲಾಗಿದ್ದು ಅದು ಪ್ರಕಾಶವನ್ನು ಬೀರುತ್ತಿತ್ತು ಎಂದು ಹೇಳಲಾಗಿದೆ. "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ" (ಕೀರ್ತನೆ 119 : 105) ಎಂಬಂತೆ ಆ ಆರತಿಗಳು ದೇವರ ಪರಿಶುದ್ಧ ಗ್ರಂಥವನ್ನು ಪ್ರತಿನಿಧಿಸುತ್ತವೆ. ಮತ್ತು ಅಂಥಾಃ ಸಾಮಾನ್ಯವಾದ ದೀಪವನ್ನು ಸಜ್ಜುಗೊಳಿಸುವಿಕೆ, ಎಲ್ಲಾ ವರ್ಗದ ಕ್ರೈಸ್ತರೂ ದೇವರ ವಾಕ್ಯವನ್ನು ಹುಡುಕುವುದು ಬಹುಶಃ ಈ ಹಿಂದೆ ಎಂದೂ ಆಗಿರಲಿಲ್ಲ. ಎಣ್ಣೆಯು ಸತ್ಯದ ಆತ್ಮನನ್ನು ಪ್ರತಿಧಿಸುತ್ತದೆ. ಅದು ಆಗ ಎಲ್ಲರ ಆರತಿಗಳಲ್ಲಿಯೂ ಪ್ರಕಟವಾಯಿತು; ಆದರೆ ಎಲ್ಲರೂ ತಮ್ಮ ಪಾತ್ರೆಗಳಲ್ಲಿ ಸತ್ಯದ ಆತ್ಮನನ್ನು ತುಂಬಿಸಿಕೊಂಡಿರಲಿಲ್ಲ.

1844ರ ಆಶಾಭಂಗವು ಈ ಸಾಮ್ಯದಲ್ಲಿ 'ಮದಲಿಂಗನು ಬರುವುದಕ್ಕೆ ತಡಮಾಡಿದನು' ಎಂದು ಸಂಕ್ಷಿಪ್ತವಾಗಿ ದಾಖಲಾಗಿದೆ. ಅಂದರೆ ಆತನನ್ನು ನಿರೀಕ್ಷಿಸಿದವರಿಗೂ ಆತನು ತಡಮಾಡುವನು ಎಂಬುದಾಗಿ ತೋರಿತು. ಎಲ್ಲರಿಗೂ ಗೊಂದಲ ಮತ್ತು ಕತ್ತಲಿನ ಅನುಭವವಾಯಿತು. ಅನೇಕ ತಪ್ಪಾದ ಮತ್ತು ಕಾಲ್ಪನಿಕ ದೃಷ್ಟಿಕೋನವು ಅಲ್ಲಿದ್ದ ಕೆಲವರಲ್ಲಿ ಪ್ರವೇಶಿಸಿ ಅವರು ನಿರಾಶೆಗೊಂಡರು ಎಂಬುದನ್ನು ಸಾಮ್ಯದಲ್ಲಿ: "ಮದಲಿಂಗನು ಬರುವುದಕ್ಕೆ ತಡಮಾಡಲು ಅವರೆಲ್ಲರೂ ತೂಕಡಿಸಿ ಮಲಗಿದರು" (ವಚನ 5) ಎಂಬ ಹೇಳಿಕೆಯಲ್ಲಿ ತೋರಿಸಲಾಗಿದೆ. ಹೌದು, ಅವರ ಕತ್ತಲೆಯ ಹಾಗೂ ತೂಕಡಿಸುವಿಕೆಯಲ್ಲಿ ಅನೇಕರಿಗೆ ವಿಲಕ್ಷಣ/ವಿಚಿತ್ರವಾದ, ಅನುಚಿತವಾದ ಕನವರಿಕೆಯಾಯಿತು.

ಆದರೆ ಸಾಮ್ಯವು ಎರಡನೆಯ ಚಳುವಳಿಯನ್ನು ತೋರಿಸುತ್ತದೆ, ಒಂದೇ ರೀತಿಯದು, ಆದರೆ ವಿಭಿನ್ನ. ಅದು ಕನ್ಯೆಯರಲ್ಲಿ ಸೂಚಿಸುತ್ತದೆ. ಆದರೆ ಅದೇ ರೀತಿಯ ಸಾಮಾನ್ಯ ವರ್ಗವನ್ನು ಉಲ್ಲೇಖಿಸಲಾಗಿದೆ. ಆದರೆ, ಅದೇ ವ್ಯಕ್ತಿಗಳೆಂಬ ಅಗತ್ಯವಿಲ್ಲ. ಯಾಕೆಂದರೆ ಮೊದಲನೆಯ ಚಳುವಳಿಯು ಕ್ರಿಸ್ತನು ಸಭೆಯ ಮದಲಿಂಗನಾಗಿ ಬರುವ ದ್ವಿತೀಯಾಗಮನದ ಕಾಲದ ಬಗ್ಗೆ ಪ್ರವಾದನೆಯ ಮೇಲೆ ಬೀರಿದ ಬೆಳಕಿನ ಫಲವಾಗಿತ್ತು. ಎರಡನೆಯ ಚಳುವಳಿಯೂ ಅದರಂತೆ ಇತ್ತು. ಆದರೆ ಇವುಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿದ್ದವು. ಮೊದಲನೆಯದರಲ್ಲಿ ಎಲ್ಲಾ ಕನ್ಯೆಯರ ಆರತಿಗಳೂ ಒಂದೇ ರೀತಿಯಾಗಿ ಬೆಳಗುತ್ತಿದ್ದವು. ಆದರೆ ಮದಲಿಂಗನನ್ನು ನಿರೀಕ್ಷಿಸುತ್ತಿದ್ದ ಸಮೂಹವು (ಬಗೆ ಬಗೆಯಾಗಿ) ಮಿಶ್ರಿತವಾಗಿತ್ತು; ಆದರೆ ಎರಡನೆಯ ಚಳುವಳಿಯಲ್ಲಿ, ಎಲ್ಲರೂ ನಿದ್ರೆಯಿಂದ ಎಚ್ಚರಗೊಳ್ಳುತ್ತಾರೆ, ಆದರೆ ತಮ್ಮ ಹೃದಯಗಳಲ್ಲಿ ಸತ್ಯದ ಆತ್ಮನನ್ನು ಮತ್ತು ಸತ್ಯವೇದದ ಜ್ಞಾನವನ್ನು ಹೊಂದಿದವರು ಅಂದರೆ ತಮ್ಮ ಆರತಿಗಳನ್ನು ಸಜ್ಜುಗೊಳಿಸಿಕೊಂಡಿರುವವರು ಮಾತ್ರವೇ ಮದಲಿಂಗನ ಸಂಗಡ ಹೋಗುತ್ತಾರೆ. ಮೊದಲನೆಯ ಚಳುವಳಿಯ ಬಗ್ಗೆ ಆಶಾಭಂಗವನ್ನು ಮುಂತಿಳಿಸಲಾಗಿತ್ತು ಮತ್ತು 1335 ದಿನಗಳ ಕಾಯುವಿಕೆ ಅಗತ್ಯವಾಯಿತು. ಆದರೆ. ಎರಡನೆಯದು ಆಶಾಭಂಗವಲ್ಲ. ಇನ್ನು ಮುಂದೆ ಯಾವುದೇ ಕಾಯುವಿಕೆಯು ಅಗತ್ಯವಾಗಿರಲಿಲ್ಲ. ಯಾಕೆಂದರೆ ಅದರ ನೆರವೇರಿಕೆಯು ಸರಿಯಾಗಿ 1335 ಪ್ರವಾದನಾ ದಿನಗಳ ಅಂತ್ಯದಲ್ಲಿ ಅಂದರೆ ಅಕ್ಟೋಬರ್ 1874ರಲ್ಲಿ ಬಂದಿತು. ಅದು ಕಾಯುವ ಅವಧಿಯಾದ 1335 ವರ್ಷಗಳನ್ನು ಮುಗಿದಿತ್ತು. ಕರ್ತನ ಪ್ರಸನ್ನತೆಯ ಸತ್ಯವು ಈ ಮೊದಲು ಹೇಳಿದ ಪ್ರವಾದನೆಯಲ್ಲಿ ಕಲಿಸಿದಂತೆಯೇ ಗ್ರಹಿಸುವದು ಪ್ರಾರಂಭವಾಯಿತು. ನೂತನ ಯುಗದ ಮುಂಜಾನೆಗಿಂತ ಬಹಳ ಮುಂಚೆಯೇ ಅಂದರೆ ಅದು ಮಧ್ಯರಾತ್ರಿಯ ಸಮಯವಾಗಿತ್ತು. ಆಗ ಕನ್ಯೆಯರು ಆಳವಾದ ತೂಕಡಿಕೆಯುಳ್ಳ ನಿದ್ರೆಗೆ ಜಾರಿರುವಾಗ "ಇಗೋ, ಮದಲಿಂಗನು! ಅವನನ್ನು ಎದುರುಗೊಳ್ಳುವುದಕ್ಕೆ ಹೊರಡಿರಿ" (ವಚನ 6) ಎಂಬ ಎಚ್ಚರಿಕೆಯ ಕೂಗಾಯಿತು – ಇಗೋ ಮದಲಿಂಗನು ಬರುತ್ತಿದ್ದಾನೆ* ಎಂದಲ್ಲ, ಆದರೆ, ಆತನು ಆಗಲೇ ಬಂದಿದ್ದಾನೆ, ಆದರೆ ನಾವೀಗ ಮನುಷ್ಯ ಕುಮಾರನ ಪ್ರಸನ್ನತೆಯಲ್ಲಿ ಜೀವಿಸುತ್ತಿದ್ದೇವೆ (Parousia). ಪ್ರಸ್ತುತ ಚಳುವಳಿಯ ಗುಣಲಕ್ಷಣವು ಆ ದಿನದಿಂದ ಅದೇ ಆಗಿದೆ; ಕರ್ತನ ಪ್ರಸನ್ನತೆಯ ಮತ್ತು ರಾಜ್ಯದ ಕಾರ್ಯಗಳ ಪ್ರಕಟನೆಯು ಈಗ ಪ್ರಗತಿಯಲ್ಲಿದೆ. ಲೇಖಕನು, ಮತ್ತು ಜೊತೆ ಕೆಲಸಗಾರರು ಕರ್ತನ ಪ್ರಸನ್ನತೆಯ ಸತ್ಯವನ್ನು ಸಾರಿ ತಿಳಿಸಿದರು. 1878ರ ಶರತ್ಕಾಲದವರೆಗೆ ಪ್ರವಾದನೆಗಳ ಮೂಲಕ ವಿವರಿಸಿ, ಮತ್ತು ಪುಸ್ತಕದಲ್ಲಿ ಉಪಯೋಗಿಸುವಂತೆ, ನಕ್ಷೆಯ ಅಥವಾ ಹಲಗೆಯ ಮೇಲೆ ಬರೆದು ತಿಳಿಸಿದರು. ನಂತರ ನಮ್ಮ Zion's Watch Tower and Herald of Christ's presence ಎಂಬ ಪುಸ್ತಕದ ಪ್ರಕಾಶನವನ್ನು ಪ್ರಾರಂಭ ಮಾಡುವ ಸಿದ್ಧತೆಗಳನ್ನು ಮಾಡಿದರು.

ಕರ್ತನ ಆಶೀರ್ವಾದದಿಂದ ಈ ಪ್ರಕಾಶನದ ಸಂದೇಶಗಳ ಮಿಲಿಯಾಂತರ ಪುಸ್ತಕಗಳು ದೂರ ದೇಶಗಳಿಗೆ ಸಾಗಿಸುವಲ್ಲಿ, ಕಾಲವು ಪರಿಪೂರ್ಣ ವಾಯಿತು, ಕ್ರಿಸ್ತನ ರಾಜ್ಯವು ಈಗ ಸ್ಥಾಪಿತವಾಗುತ್ತಿದೆ, ಅದೇ ಸಮಯದಲ್ಲಿ ಮಾನವನ ರಾಜ್ಯಗಳು ಮತ್ತು ಪದ್ಧತಿಗಳು ಪುಡಿ ಪುಡಿಯಾಗಿ ಅದರ ತೀವ್ರವಾದ ನಾಶನದತ್ತ ಸಾಗಿದೆ ಎಂಬ ಶುಭ ಸಮಾಚಾರವನ್ನು ಸಾರುತ್ತಾ ಸಾಗಿವೆ.

ಕನ್ಯಾವರ್ಗದವರೆಲ್ಲರೂ ತಮ್ಮ ಆರತಿಗಳನ್ನು ನೆಟ್ಟಗೆ ಮಾಡಿಕೊಂಡರಾದರೂ, ಎಲ್ಲರೂ ನೋಡಲು ಸಾಧ್ಯವಾಗಲಿಲ್ಲ ಎಂಬ ಮುನ್ನೆಚ್ಚರಿಕೆಯನ್ನು ಈ ಸಾಮ್ಯವು ನಮಗೆ ನೀಡುತ್ತದೆ. ತಮ್ಮ ಪಾತ್ರೆಗಳಲ್ಲಿ ಎಣ್ಣೆ ಇದ್ದ ಪ್ರತಿಷ್ಠಿತರು ಮಾತ್ರವೇ ತಮ್ಮ ಆರತಿಗಳಿಂದ

---

* ಅತ್ಯಂತ ಪುರಾತನವಾದ ಗ್ರೀಕ್ ಹಸ್ತಪ್ರತಿಗಳು (Sinaitic and Vatican) ಬರುತ್ತಿದ್ದಾನೆ ('Cometh') ಎಂಬ ಪದವನ್ನು ಬಿಟ್ಟುಬಿಟ್ಟಿದೆ ಮತ್ತು "ಇಗೋ, ಮದಲಿಂಗನು!" ಎಂದು ಮಾತ್ರ ಓದಬಹುದು

ಬೆಳಕನ್ನು ಪಡಕೊಂಡರು ಮತ್ತು ಸತ್ಯವನ್ನು ಮೆಚ್ಚಿಕೊಂಡರು. ಇತರರು (ಎಲ್ಲರೂ ಶುದ್ಧ ಕನ್ಯೆಯರೇ) ಎಣ್ಣೆ ಮತ್ತು ಬೆಳಕನ್ನು ಒಂದು ಸಮಯದಲ್ಲಿ ಪಡಕೊಳ್ಳುತ್ತಾರೆ ಮತ್ತು ಅದರಿಂದ ಹೆಚ್ಚಿನ ಆಶೀರ್ವಾದವನ್ನು ಹೊಂದುತ್ತಾರೆ; ಆದರೆ ಎಣ್ಣೆ ಎಂಬ ಸತ್ಯದ ಆತ್ಮನನ್ನು ತುಂಬಿಸಿಕೊಂಡಿರುವವರು ಸಕಾಲದಲ್ಲಿ ಬೆಳಕನ್ನು ಪಡಕೊಳ್ಳುವರು ಮತ್ತು ಮಹಾ ಆಶೀರ್ವಾದಗಳನ್ನು ಹೊಂದಿಕೊಳ್ಳುವರು. ಮತ್ತು ಅವರು ಮಾತ್ರವೇ ಮದಲಿಂಗನೊಡನೆ ಮದುವೆಗೆ ಹೋಗುವರು. ಎಣ್ಣೆ ಅಥವಾ ಪ್ರತಿಷ್ಠತೆಯಿಂದ ಕೂಡಿದ ಆತ್ಮ ಮತ್ತು ಅದರ ಸಂಗಡ ಬರುವ ಬೆಳಕನ್ನು ಒಬ್ಬ ಕನ್ಯೆಯಿಂದ ಮತ್ತೊಬ್ಬ ಕನ್ಯೆಗೆ ಸಾಗಿಸುವಂತಿಲ್ಲ. ಪ್ರತಿಯೊಬ್ಬರೂ ತಾವೇ ಆ ಆತ್ಮನಿಂದ ತುಂಬಿ ಕೊಳ್ಳಬೇಕು; ಪ್ರತಿಯೊಬ್ಬರು ತಮ್ಮ ಈ ಎಣ್ಣೆಯ (ಸತ್ಯ, ಮತ್ತು ಅದರ ಆತ್ಮದ ಪ್ರತಿಷ್ಠೆ ಹಾಗೂ ಪರಿಶುದ್ಧತೆ) ಸ್ವಂತ ಸರಬರಾಜನ್ನು ಪಡಕೊಳ್ಳಬೇಕು. ಅದರ ಬೆಲೆಯು ಸ್ವ-ನಿರಾಕರಣೆ, ತಪ್ಪಾಗಿ ನಿರೂಪಿಸುವಿಕೆ (ಅಬದ್ಧ ವಿವರಣೆ) ಮತ್ತು ಅಗ್ನಿಮಯ ಪರೀಕ್ಷೆ ಇವುಗಳ ಮಾರ್ಗದಲ್ಲಿ ಗಣನೀಯವಾದುದು. ಮಹಾ ಸಂಕಟ ಸಮಯದ ಅನುಭವವು ಮೂರ್ಖ ಕನ್ಯೆಯರು ಎಣ್ಣೆಯನ್ನು ಕೊಂಡುಕೊಳ್ಳಲು ಹೋದ (ಮಾರುಕಟ್ಟೆ) ಅಂಗಡಿ ಬೀದಿಯಾಗಿದೆ. ಆದರೆ ಅವರು ಕುರಿಮರಿಯ ವಧುವಿನ ಸದಸ್ಯರಾಗಿ ಮದುವೆಗೆ ಹೋಗಲು ಬಹಳ ತಡವಾಯಿತು. "ಕಡಿಮೆ ಮನ್ನಣೆ" ಹೊಂದಿದ ಪಾತ್ರೆಗಳಂತೆ ಅವರುಗಳು ತಮ್ಮ ದಡ್ಡತನಕ್ಕಾಗಿ ಪಶ್ಚಾತ್ತಾಪ ಪಡುವುದರಿಂದ ನಾಶಮಾಡಲಾಗುವುದಿಲ್ಲ ಎಂದು ಪರಿಶುದ್ಧಗ್ರಂಥವು ಸೂಚಿಸುತ್ತದೆ, ಆದರೆ ಹಾಗೆಯೇ ಒಡೆಯನ ಉಪಯೋಗಕ್ಕೆ ಒಗ್ಗಿಕೊಂಡು ಅವರು ಇನ್ನೂ ಆತನ ದೇವಾಲಯದಲ್ಲಿ ಆತನನ್ನೇ ಸೇವಿಸುತ್ತಾರೆ".

ದೇವದೂತನ ಮಾತುಗಳು ಪುನರಾವರ್ತನೆ ಯಾಗುವಂತೆ 13ನೇ ವಚನವು ಹೀಗಿದೆ – "ನೀನು ಹೋಗಿ ಅಂತ್ಯದವರೆಗೆ ಇರು; ನೀನು ದೀರ್ಘನಿದ್ರೆಯನ್ನು ಹೊಂದಿ ಯುಗದ ಸಮಾಪ್ತಿಯಲ್ಲಿ (1335 ದಿನಗಳ ನಂತರ, ಆಗ ಪ್ರಾರಂಭವಾಗುವ ಸುಗ್ಗಿಯಲ್ಲಿ) ಎದ್ದು ನಿನಗಾಗುವ ಸ್ವಾಸ್ಥ್ಯದೊಳಗೆ (ಪಾಲು, ಪ್ರತಿಫಲ) ನಿಲ್ಲುವಿ" ಎಂದು ಹೇಳಿದನು.

"ನೀನು ಹೋಗಿ ಅಂತ್ಯದವರೆಗೆ ಇರು" ಎಂಬ ಹೇಳಿಕೆಯಲ್ಲಿ 'ಅಂತ್ಯ' ಎಂಬುದನ್ನು 'ಅಂತ್ಯಕಾಲ' ಎಂಬುದಕ್ಕೆ ಬೇರೆಯದಾದ ಅಭಿಪ್ರಾಯವನ್ನು ಕೊಡುತ್ತದೆ ಎಂದು ಗಮನಿಸಬೇಕಾಗುತ್ತದೆ. "ಸುಗ್ಗಿಯು ಯುಗದ ಸಮಾಪ್ತಿ" ಮತ್ತು ಈಗಾಗಲೇ ತೋರಿಸಿರುವಂತೆ ಈ ಸುಗ್ಗಿಯು ಕ್ರಿ.ಶ. ಶರತ್ಕಾಲ 1874ರಿಂದ ನಾಲ್ವತ್ತು ವರ್ಷಗಳ ಅವಧಿಯದು. 1335 ದಿನಗಳ ಮುಕ್ತಾಯ, ಕ್ರಿ.ಶ. 1914ರ ಶರತ್ಕಾಲ (ಲೇಖಕನ ಮುನ್ನುಡಿಯನ್ನು ನೋಡಿ, 1916). ದಾನಿಯೇಲನು ಅವನ ಸ್ವಾಸ್ಥ್ಯವನ್ನು, ಭಾಗವನ್ನು, ಬಹುಮಾನವನ್ನು ಮೀಕಾಯೇಲನ (ಕ್ರಿಸ್ತನ) ರಾಜ್ಯದಲ್ಲಿ ಎಲ್ಲಾ ಪರಿಶುದ್ಧ ಪ್ರವಾದಿಗಳೊಡನೆ, ಮತ್ತು ಸುವಾರ್ತಾಯುಗದ ಸಂತರೊಡನೆ ಈ ಸುಗ್ಗಿಕಾಲದ ಅಂತ್ಯದಲ್ಲಿ ಪಡಕೊಳ್ಳಬೇಕಾಗಿದೆ. ಸಂತರುಗಳು ಕ್ರಮಾಂಕದಲ್ಲಿ, ಮತ್ತು ಗೌರವದಲ್ಲಿ ಸಹಾ ಮೊದಲಿಗರು (ಇಬ್ರಿಯ 11:40). [see SCRIPTURE STUDIES, Vol I., 288]

* * * * * * *